"SATYA VADI" ॥ ಶ್ರೀ ॥ No MRegd 1299

ಸತ್ಯವಾದಿ

ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿತವಾದದು

(Founded 1917)

Proprietors—The Satyavadi Limited, Mysore

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 24 ಸಂಚಿಕೆ 34] ಬುಧವಾರ 15-5-1940 ಬಿಡಿಪ್ರತಿ 6 ಕಾಸು

ಬ್ರಿಟಿಷ್ ಮಂತ್ರಿಮಂಡಲದಲ್ಲಿ ಬದಲಾವಣೆ

ಚರ್ಚಿಲ್ಲರು ಮುಖ್ಯಮಂತ್ರಿ [— — ಚೇಂಬರ್ಲೇನರು ಕೌನ್ಸಿಲ್ ಅಧ್ಯಕ್ಷರು

Olympia

"ಅಕ್ಕ" ಸಾಮಾಜಿಕ, ಭಾವಪರಿಪೂರ್ಣ ಕಥೆ —

ಲೇಖಕರು—ಜಿ. ಸದಾಶಿವಭಟ್ಟರು, ಕಕ್ಕುಂಜೆ —

(ಹಿಂದಿನ ವಾರದಿಂದ ಮುಂದುವರಿದುದು)

ಈಗ ಅದರಲ್ಲಿ ಎಷ್ಟೋ ಎಲೆಗಳೂ ಸುಕ್ಕು ಎಷ್ಟೋ ಪುಷ್ಪಗಳೂ ಇವೆ. ನೀನು ಇಲ್ಲಿಗೆ ಒಂದಾಗ ಸಾಸಿಬ್ಬರೂ ಅದನ್ನು ನೋಡಲು ಹೋಗೋಣ "

ಮನೋರಮೆಯು ಕಂಪಿತಳಾಗಿ ಆ ಪತ್ರಕ್ಕೆ ಉತ್ತರವನ್ನೇ ಒರೆಯಲಿಲ್ಲ.

ಇತ್ತ ಮಾಧವ ಕಣ್ಣುಗಳಲ್ಲಿ ಕಪ್ಪು ಹರಡಿತು. ಅವಳ ಪ್ರಫುಲ್ಲಿತವಾದ ಮುಖವು ಸ್ವಲ್ಪ ಗಂಭೀರವಾಗಿದ್ದಿತು. ಕೆಲಸದಲ್ಲಿ ಹೆಚ್ಚು ಮನಸ್ಸು ಹಿಡಿಯುತ್ತಿರಲಿಲ್ಲ— ಒಂದು ನಮೂನೆಯ ಶಿಥಿಲತೆಯು ಒಂದುಬಿಟ್ಟಿದ್ದಿತು. ಈಗ ಅವಳಲ್ಲಿ ಮೊದಲಿನಂತೆಯೇ ಎಲ್ಲರ ಸಮಾಚಾರ ತೆಗೆದುಕೊಳ್ಳುವ, ಎಲ್ಲರೊಡನೆ ಆತ್ಮೀಯತೆಯನ್ನು ತೋರಿಸುವ ಇಚ್ಛೆಯು ಮೊದಲಿಗಿಂತಲೂ ಹೆಚ್ಚಿದೆ. ಆದರೆ ಈಗ ಎಲ್ಲಾ ವಿಷಯಗಳೂ ಮೊದಲಿನಂತೆ ಸೆನಿರುವದಿಲ್ಲ ; ನಡುನಡುವೆ ಮರವೆಯಾಗುತ್ತಿದ್ದಿತು.

ಈಗಲೂ ಅವಳನ್ನು 'ಅಕ್ಕಾ' ಎಂದು ಎಲ್ಲರೂ ಕರೆಯುತ್ತಾರೆ. ಈಗಲೂ ಆ ಕಲ್ಪತರುವನ್ನೇ ಎಲ್ಲರೂ ನೋಡುತ್ತಿರುತ್ತಾರೆ— ಅವಳ ಮುಂದೆಯೇ ಕೈಯೊಡ್ಡುತ್ತಾರೆ. ನಿತ್ಯ ಅಭೀಷ್ಟ ಫಲವನ್ನು ಪಡೆದುಕೊಳ್ಳುತ್ತಾರೆ. ಆದರೆ ಆ ತರುವು ಈಗ ಅಷ್ಟು ಸರಸವಾಗಿಲ್ಲ. ಕೆಲವರ ಮನಸ್ಸಿನಲ್ಲಿ ನಡುನಡುವೆ 'ಇದು ಎಲ್ಲಾದರೂ ಮುಂದೆ ಒಣಗಿಹೋಗುವುದೇ ?' ಎಂದು ಸಂದೇಹವಾಗುತ್ತಿದೆ

ಮನೋರಮೆಯು ನಿತ್ಯವೂ ಬರುತ್ತಾಳೆ ; ಬೇರೆಬೇರೆ ಮಾತುಗಳಾಗುತ್ತವೆ. ಕೇವಲ ಇದೇ ಮಾತುಗಳನ್ನಾಡುವುದಿಲ್ಲ. ಮಾಧವಿಯು ಇದರಿಂದ ದುಃಖಿತಳಾಗುವಳೆಂದು ಮನೋರಮೆಯು ತಿಳಿಯುತ್ತಿದ್ದಳು. ಈಗ ಈ ಮಾತುಗಳ ಆಲೋಚನೆಯು ಆಗದಿದ್ದಷ್ಟಕ್ಕೂ ಒಳ್ಳೇದು. ಮನೋರಮೆಯು ಇದನ್ನೇ ಯೋಚಿಸಿದ್ದಾಳೆ— " ಒಂದುವೇಳೆ ಈ ಅಭಾಗ್ಯಳು ಇದೆಲ್ಲವನ್ನೂ ಮರೆತರೆ ! "

ಸುರೇಂದ್ರನಾಥನು ಆರೋಗ್ಯವಂತನಾಗಿ ತಂದೆಯ ಮನೆಗೆ ಹೋಗಿದ್ದಾನೆ. ಮಲತಾಯಿಯು ಅವನಲ್ಲಿ ಈಗ ಎಚ್ಚರಿಕೆ ಇಡುವುದನ್ನು ಸ್ವಲ್ಪ ಕಡಿಮೆ ಮಾಡಿದ್ದಾಳೆ. ಆದರಿಂದಲೇ ಸುರೇಂದ್ರನ ಶರೀರವು ಸ್ವಲ್ಪ ವಿಶ್ರಾಂತಿ ಹೊಂದಿದೆ. ಆದರೆ ಅವನು ಪೂರ್ಣರೀತಿಯಿಂದ ಸುಧಾರಿಸಿರಲಿಲ್ಲ.— ಅವನ ಹೃದಯದಲ್ಲಿ ಒಂದು ವ್ಯಥೆ ಇದೆ. ರೂಪ ಮತ್ತು ಯೌವನ ಆಕಾಂಕ್ಷೆ-ಪಿಪಾಸೆಯು ಇಷ್ಟರವರೆಗೂ ಅವನ ಮನಸ್ಸಿನಲ್ಲಿ ಉದಯವಾಗಿರಲಿಲ್ಲ. ಇದನ್ನು ಅವನು ಯೋಚಿಸುವುದೂ ಇಲ್ಲ. ಈಗಲೂ ಅವನು ಮೊದಲಿನಂತೆಯೇ ಅನ್ಯಮನಸ್ಕನೂ, ಆತ್ಮನಿರ್ಭರತೆಯಿಂದೆ ಶೂನ್ಯನೂ ಆಗಿದ್ದಾನೆ. ಯಾರನ್ನು ಅವಲಂಬಿಸಿಕೊಂಡಿರಬೇಕು, ಎಂಬುದನ್ನು ಅವನಿಂದ ಹುಡುಕಲಾಗಲಿಲ್ಲ. ಅದರಿಂದ ಅವನು ತನ್ನ ಕೆಲಸವನ್ನು ತಾನೇ ನೋಡಿಕೊಳ್ಳಬಲ್ಲನೆಂಬುದೂ ಇಲ್ಲ. ಈಗಲೂ ತನ್ನ ಕೆಲಸಕ್ಕಾಗಿ ಅವನು ಮತ್ತೊಬ್ಬರ ಮುಖವನ್ನು ನೋಡುತ್ತಿರುತ್ತಾನೆ. ಆದರೆ, ಈಗ ಅವನಿಗೆ ಮೊದಲಿನಂತೆ ಎಲ್ಲಾ ಕೆಲಸಗಳಲ್ಲಿ ಮನಸ್ಸು ಹಿಡಿಯುವದಿಲ್ಲ. ಎಲ್ಲಾ ಕೆಲಸಗಳಲ್ಲಿಯೂ ಅವನು ಸ್ವಲ್ಪ ಸ್ವಾನತೆಯನ್ನು ನೋಡುತ್ತಾನೆ— ಸ್ವಲ್ಪ ಸಂತೋಷವನ್ನು ಪ್ರಕಟಿಸುತ್ತಾನೆ. ಅವನ ಮಲತಾಯಿಯು ಇವೆಲ್ಲವನ್ನೂ ನೋಡಿ ಕೇಳಿ ಹೇಳುತ್ತಾಳೆ— " ಈಗ ಸುರೇಂದ್ರನು ಪರಿವರ್ತನೆ ಹೊಂದಿದ್ದಾನೆ."

ಒಂದು ದಿನ ಸುರೇಂದ್ರನಿಗೆ ಜ್ವರವು ಬಂದಿತು ; ಬಹಳ ಕಷ್ಟವಾಯಿತು ಅವನ ಕಣ್ಣುಗಳಿಂದ ನೀರು ಬಂದಿತು. ಮಲತಾಯಿಯು ಹತ್ತಿರವೇ ಕುಳಿತಿದ್ದಳು ಅವಳು ಒಂದು ಹೊಸ ವಿಷಯವನ್ನು ಕಂಡಳು. ಕ್ಷಣಹೊತ್ತಿನಲ್ಲಿಯೇ ಅವಳ ಕಣ್ಣುಗಳಿಂದಲೂ ನೀರು ಸುರಿಯಲಾರಂಭಿಸಿತು. ಅವಳು ಪ್ರೇಮಪೂರ್ವಕವಾಗಿ ಅವನ ಕಣ್ಣುಗಳನ್ನು ಒರೆಸಿ ಕೇಳಿದಳು— " ಏನಾಯಿತು ಮಗೂ ? "

ಸುರೇಂದ್ರನು ಸಮ್ಮತಿಸಿದನು. ಆಮೇಲೆ ಒಂದು ಪೋಸ್ಟ್ ಕಾರ್ಡನ್ನು ತರಿಸಿಕೊಂಡು ಅದರಲ್ಲಿ ವಕ್ರವಾದ ಅಕ್ಷರಗಳಲ್ಲಿ ಬರೆದನು— " ಅಕ್ಕಾ ! ನನಗೆ ಜ್ವರ ಬಂದಿದೆ ; ಬಹಳ ಕಷ್ಟವಾಗುತ್ತಲಿದೆ. "

ಅದರ ಆ ಪತ್ರವು ಪೋಸ್ಟಾಫೀಸಿಗೆ ತಲಪಲಿಲ್ಲ. ಮೊದಲು ಅದು ಅವನ ಮಂಚದ ಮೇಲಿನಿಂದ ನೆಲದ ಮೇಲೆ ಬಿದ್ದಿತು. ಆಮೇಲೆ ಆ ಕೋಣೆಯನ್ನು ಗುಡಿಸಲು ಬಂದವನು ದಾಳಿಂಬದ ಸಿಪ್ಪೆ, ಬಿಸ್ಕಟ್ಟಿನ ತುಂಡು, ದ್ರಾಕ್ಷಿಯ ತೊಟ್ಟುಗಳೊಂದಿಗೆ ಆ ಪತ್ರವನ್ನೂ ಗುಡಿಸಿ ಎಸೆದುಬಿಟ್ಟನು. ಸುರೇಂದ್ರನ ಹೃದಯದ ಆಕಾಂಕ್ಷೆಯು ಧೂಳಿನಲ್ಲಿ ಸೇರಿ, ಗಾಳಿಯಲ್ಲಿ ಹಾರಿ, ಹಿಮದಲ್ಲಿ ನೆನೆದು, ಬಿಸಿಲನ್ನು ತಿಂದು, ಕೊನೆಗೆ ಒಂದು ಮರದ ಕೆಳಗೆ ಬಿದ್ದಿದ್ದಿತು.

ಸ್ವಲ್ಪ ದಿನ ಅವನು ತನ್ನ ಕಾರ್ಡಿಗೆ ಉತ್ತರಬರುವ ಆಶೆಯಲ್ಲಿದ್ದನು ಆದರೆ ಬಹಳ ದಿನಗಳಾದವು. ಏನೂ ಬರಲಿಲ್ಲ. ಮೆಲ್ಲಮೆಲ್ಲನೆ ಅವನ ಜ್ವರವು ಇಳಿಯಿತು. ಪಥ್ಯವನ್ನು ತೆಗೆದುಕೊಂಡು ರೋಗದಿಂದ ನಿವಾರಣೆ ಹೊಂದಿದನು. ಅನಂತರ ಅವನ ಜೀವನದಲ್ಲಿ ಒಂದು ಹೊಸ ಘಟನೆಯಾಗಿತ್ತು. ಘಟನೆಯು ಹೊಸದಾಗಿದ್ದರೂ ಸ್ವಾಭಾವಿಕವಾಗಿದ್ದಿತು.

ಸುರೇಂದ್ರನ ತಂದೆ ರಾಯರು ಬಹಳ ಮೊದಲಿನಿಂದಲೇ ಇದನ್ನು ಬಲ್ಲರು. ಮತ್ತು ಇದರ ಆಶೆಯನ್ನಿಟ್ಟುಕೊಂಡಿದ್ದರು. ಸುರೇಂದ್ರನ ಅಜ್ಜಂದಿರು 'ಪಬ್ನಾ' ಜಿಲ್ಲೆಯ ಮಧ್ಯಮ ಶ್ರೇಣಿಯ ಒಬ್ಬ ಜಮೀನ್ದಾರರು, ಇಪ್ಪತ್ತು ಇಪ್ಪತ್ತೈದು ಗ್ರಾಮಗಳಲ್ಲಿ ಅವರ ಜಮೀನ್ದಾರಿ ಇದ್ದಿತು. ವಾರ್ಷಿಕ ಆದಾಯವು ಸುಮಾರು ಐವತ್ತು ಸಾವಿರ ರೂಪಾಯಾಗಿರಬಹುದು. ಅವರಿಗೆ ಮಕ್ಕಳುಮರಿಗಳಿರಲಿಲ್ಲ. ಸ್ವಭಾವತಃ ಖರ್ಚು ವಗೈರೆ ಕಡಿಮೆ ಇದ್ದಿತು. ಎರಡನೇದೇನೆಂದರೆ, ಅವರೊಬ್ಬ ಪ್ರಸಿದ್ಧ ಕೃಪಣರಾಗಿದ್ದರು. ಆದರಿಂದಲೇ ಅವರು ತಮ್ಮ ಸುದೀರ್ಘ ಜೀವನದಲ್ಲಿ ಬಹಳ ಹಣವನ್ನು ಗಳಿಸಿದ್ದರು. ಅವರ ನಂತರ ಅವರ ಸಮಸ್ತ ವೈಭವವು ಅವರ ಏಕ ಮಾತ್ರ ದೌಹಿತ್ರ ಸುರೇಂದ್ರನಿಗೇ ಸಿಗುವುದೆಂದು ರಾಯರು ನಿಶ್ಚಯವಾಗಿ ತಿಳಿದಿದ್ದರು. ಆದದ್ದೂ ಹಾಗೆಯೇ. ಶ್ವಶುರ ಮಹಾಶಯರು ಅಸನ್ನ ಮೃತ್ಯು ಶಯ್ಯೆಯಲ್ಲಿ ಮಲಗಿದ್ದಾರೆಂದು ರಾಯರಿಗೆ ವರ್ತಮಾನ ಬಂದಿತು. ಅವರು ಕೂಡಲೇ ಮಗನನ್ನು ಕರೆದುಕೊಂಡು 'ಪಬ್ನಾ' ಕ್ಕೆ ಹೊರಟರು. ಆದರೆ ಅವರು ತಲಪುವುದಕ್ಕೆ ಮುಂಚೆಯೇ ಶ್ವಶುರ ಮಹಾಶಯರು 'ಸ್ವರ್ಗ' ಕ್ಕೆ ಹೊರಟಿದ್ದರು.

ಬಹಳ ಆಡಂಬರದಿಂದ ಅವರ ಶ್ರಾದ್ಧಾದಿಗಳಾದವು. ವ್ಯವಸ್ಥಿತವಾದ ಅವರ ಜಮೀನ್ದಾರಿಯು ಇನ್ನೂ ಹೆಚ್ಚು ವ್ಯವಸ್ಥೆ ಮಾಡಲ್ಪಟ್ಟಿತು. 'ಪರ್ಫೆಕ್ಟ್' ಬುದ್ಧಿಯ ಹಳೆಯ ಪಕೀಲರಾದ ರಾಯರ ಕಠಿಣ ವ್ಯವಸ್ಥೆಯಿಂದ ಪ್ರಜೆಗಳು ಇನ್ನೂ ಅಧಿಕ ಕ್ಷುಬ್ಧರಾದರು !

ಈಗ ಸುರೇಂದ್ರನಿಗೆ ವಿವಾಹಮಾಡುವುದೂ ಅಗತ್ಯವಾಗಿದ್ದಿತು. ಹೆಣ್ಣು ಗೊತ್ತುಮಾಡುವವರ ಬಂದುಹೋಗುವಿಕೆಯಿಂದ ಗ್ರಾಮದಲ್ಲೆಲ್ಲಾ ಒಂದು ಗಲಭೆ ಎದ್ದಂತಾಯಿತು ನೂರು ಮೈಲಿ ದೂರದಲ್ಲಿ ಒಬ್ಬಳೇ ಒಬ್ಬಳು ಸುಂದರಿ ಇರುವ ಒಂದು ಮನೆಯಲ್ಲಿ ಹೆಣ್ಣು ಗೊತ್ತುಮಾಡುವವರ ಗುಂಪು ಬಾರಿಬಾರಿಗೂ ತನ್ನ ಪಾದಧೂಳಿಯನ್ನು ತೋರಿಸಿ ತಾಯಿತಂದೆಗಳನ್ನು ಸನ್ಮಾನಿಸಿ ಮತ್ತು ಆಶಾನ್ವಿತರನ್ನಾಗಿ ಮಾಡಲಾರಂಭಿಸಿತು. ಇದೇಪ್ರಕಾರವಾಗಿ ಐದಾರು ತಿಂಗಳು ಕಳೆಯಿತು.

ಅನಂತರ ಮಲತಾಯಿಯು ಬಂದಳು. ಅವಳ ಸಂಬಂಧೀಕರೆಲ್ಲರೂ ಬಂದರು. ಒಂದುಬಾಂಧವರಿಂದ ಇಡೀ ಮನೆಯೇ ತುಂಬಿಬಿಟ್ಟಿತು.

ಆಮೇಲೆ ಒಂದು ದಿನ ಪ್ರಾತಃಕಾಲ ವಾದ್ಯದ ಶಬ್ದ, ಡೋಲು-ಢಕ್ಕೆಗಳ ಪ್ರಚಂಡ ಶಬ್ದ ಕೈಚಪ್ಪಾಳೆ ಶಬ್ದ ಇವುಗಳಿಂದ ಇಡೀ ಗ್ರಾಮವನ್ನು ಪ್ರತಿಧ್ವನಿಗೊಳಿಸಿ ಸುರೇಂದ್ರನಾಥನು ಮದುವೆಮಾಡಿಕೊಂಡು ಬಂದನು.

ಏಳನೆಯ ಪರಿಚ್ಛೇದ

ಸುಮಾರು ಐದು ವರ್ಷಗಳು ಕಳೆದವು. ರಾಯರು ಈಗ ಇಲ್ಲ ; ವ್ರಜರಾಜ ಲಾಹಿಡಿಯವರೂ ಸ್ವರ್ಗವಾಸಿಗಳಾಗಿದ್ದಾರೆ. ಸುರೇಂದ್ರನ ಮಲತಾಯಿಯು ತನ್ನ ಪತಿಯಿಂದ ಕೊಡಲ್ಪಟ್ಟ ಸಂಪತ್ತು ಮತ್ತು ಹಣಕಾಸುಗಳನ್ನೆಲ್ಲಾ ತೆಗೆದುಕೊಂಡು ತನ್ನ ತಂದೆಯ ಮನೆಯಲ್ಲಿ ವಾಸಿಸುತ್ತಾ ಇದ್ದಾಳೆ.

ಈ ದಿನಗಳಲ್ಲಿ ಸುರೇಂದ್ರನಿಗೆ ಸುಖ್ಯಾತಿಯು ಎಷ್ಟಿದೆಯೋ, ಅಖ್ಯಾತಿಯೂ ಅಷ್ಟೇ ಇದೆ. ಕೆಲವರು " ಇಂತಹ ಬಂಧುವತ್ಸಲ, ಉದಾರ, ಸರಳ ಮತ್ತು ಮಿತ್ರಪ್ರತಿಪಾಲಕರಾದ ಜಮೀನ್ದಾರರು ಮತ್ತಾರೂ ಇಲ್ಲ ಎಂದು ಹೇಳುತ್ತಾರೆ. ಇನ್ನು ಕೆಲವರು " ಇಂತಹ ಉತ್ಪೀಡಕ ಮತ್ತು ಅತ್ಯಾಚಾರಿಯಾದ ಜಮೀನ್ದಾರರು ಇಂದಿನವರೆಗೆ ಈ ದೇಶದಲ್ಲಿ ಹುಟ್ಟಲಿಲ್ಲ " ಎಂದು ಹೇಳುತ್ತಾರೆ.

ಈ ಎರಡು ಮಾತುಗಳೂ ನಿಜವೆಂದು ನಮಗೆ ಗೊತ್ತಿದೆ- ಮೊದಲಿನ ಮಾತು ಸುರೇಂದ್ರನಿಗೆ ಸಂಬಂಧಿಸಿದುದು. ಎರಡನೇ ಮಾತು ಅವನ ಮ್ಯಾನೇಜರ್ ಮಧುರಾನಾಥನಿಗೆ ಸಂಬಂಧಿಸಿದುದು ಇವೆರಡೂ ನಿಜ.

ಸತ್ಯವಾದಿ

ರಾಜಕೀಯ ಸುಧಾರಣೆಗಳು

ಮೈಸೂರು ರಾಜಕೀಯ ಸುಧಾರಣೆಗಳು ಈಗ ಕಾನೂನು ರೂಪವಾಗಿ ಪ್ರಕಟಗೊಂಡಿದೆ. ಈ ಸುಧಾರಣೆಗಳ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ನಾವು ಸುಧಾರಣಾ ಸಮಿತಿಯ ವರದಿಯು ಪ್ರಕಟವಾದಾಗಲೇ ವ್ಯಕ್ತಪಡಿಸಿರುತ್ತೇವೆ. ಇತರರು ಅನೇಕ ಮಂದಿಯೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ಸುಧಾರಣೆಗಳು ಪ್ರಗತಿಪರವಾಗಿಲ್ಲದಿರುವದರಿಂದ ಏನೂ ಪ್ರಯೋಜನವಿಲ್ಲವೆಂದೂ ಅದು ಸುಧಾರಣೆಯೇ ಅಲ್ಲವೆಂದೂ ಮುಂತಾಗಿ ಅನೇಕರು ಟೀಕಿಸಿರುತ್ತಾರೆ. ಇನ್ನು ಕೆಲವರು ಸುಧಾರಣೆಗಳು ಬಹಳ ಉತ್ತಮವಾಗಿರುತ್ತವೆಂದೂ, ರಾಜಕೀಯ ಇತಿಹಾಸದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆಯೆಂದೂ, ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿಯೇ ಲಭ್ಯವಾಯಿತೆಂದೂ, ಪ್ರಜೆಗಳು ಈ ಸುಧಾರಣೆಗಳನ್ನು ಅನುಷ್ಠಾನಕ್ಕೆ ತಂದು, ಅದರ ಸಂಪೂರ್ಣ ಪ್ರಯೋಜನಗಳನ್ನು ಹೊಂದಿ ಆದರ್ಶರಾಗಬೇಕೆಂದೂ ಮುಂತಾಗಿ ಹೊಗಳಿದವರೂ ಇದ್ದಾರೆ.

ತನ್ನತನಗೆ ತೋರಿದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಪ್ರತಿಯೊಬ್ಬರೂ ಸಂಪೂರ್ಣ ಸ್ವತಂತ್ರವಾಗಿರುತ್ತಾರೆ. ಆದರೆ ತಾವು ಹಾಗ ಹೊಗಳುವಾಗಲಾಗಲೀ, ಟೀಕಿಸುವಾಗ ಲಾಗಲೀ, ಅದಕ್ಕೆ ಆಧಾರಭೂತವಾದ ಕಾರಣಗಳನ್ನು ತೋರಿಸಿಕೊಡಬೇಕಾದ್ದು ಧರ್ಮವಾಗಿರುತ್ತದೆ. ಹಾಗೆ ಕಾರಣವಿಲ್ಲದೇ ಇರತಕ್ಕ ಹೊಗಳಿಕೆಗಳಾಗಲೀ ಟೀಕೆಗಳಾಗಲೀ ಪ್ರಜಾಕೋಟಿಯಲ್ಲಿ ಬೆಲೆಬಾಳಲಾರವು. ಟೀಕೆ ಮಾಡಿದವರೆಲ್ಲರೂ ತಮಗೆ ತೋರಿದ ಕಾರಣಗಳನ್ನೆಲ್ಲಾ ಕೂಟ್ಟು ಈ ಸುಧಾರಣೆಗಳು ಪ್ರಯೋಜನವಿಲ್ಲವೆಂದು ಹೇಳಿರುತ್ತಾರೆ. ಆದರೆ ಈ ಸುಧಾರಣೆಗಳು ಸರ್ವತೋಮುಖವಾದ ಅಭಿವೃದ್ಧಿಯನ್ನು ಉಂಟುಮಾಡುವಂಥವು ಎಂದು ಹೊಗಳಿದವರು ಈ ಸುಧಾರಣೆಗಳಿಂದ ಆಗಬಹುದಾದ ಅಭಿವೃದ್ಧಿಯು ಏನೆಂಬುದನ್ನು ಸಾಮಾನ್ಯವಾಗಿಯಾದರೂ ವಿಶದೀಕರಿಸಿಲ್ಲ. ಸುಧಾರಣೆಗಳು ಸ್ವೀಕಾರಾರ್ಹವಾಗಿರಲೀ ಅಥವಾ ಸ್ವೀಕಾರಾರ್ಹವಾಗದಿರಲೀ ಅವುಗಳನ್ನು ಅಚರಣೆಗೆ ತಂದು ಅದರ ಮುಖಾಂತರವೇ ಆ ಸುಧಾರಣೆಗಳ ಗುಣಗಳನ್ನು ತೋರಿಸಿಕೊಡಬೇಕೆಂದು ಟೀಕಿಸಿದವರೂ ಕೂಡಾ ಹೇಳಿರುತ್ತಾರೆ. ಈ ಸುಧಾರಣೆಗಳು ನಿಷ್ಪ್ರಯೋಜಕವೆಂದು ಹೇಳಿದ ಮೈಸೂರು ಕಾಂಗ್ರೆಸ್ ಸಂಸ್ಥೆಯೂ ಕೂಡಾ ಚುನಾವಣೆಗಳಲ್ಲಿ ಭಾಗವಹಿಸಿ, ಬಹುಮತವನ್ನು ಪಡೆಯಬೇಕೆಂದು ನಿಶ್ಚಯಿಸಿದೆ. ಹೀಗಿರುವಾಗ ಯಾರ ಅಭಿಪ್ರಾಯವು ಏನೇ ಇದ್ದರೂ ಯಾವ ಪ್ರತಿಭಟನೆಯೂ ಇಲ್ಲದೇ ಸುಧಾರಣೆಗಳನ್ನು ಅಂಗೀಕರಿಸುವ ನಿಶ್ಚಯವು ಜನಸಾಮಾನ್ಯದಲ್ಲೆಲ್ಲಾ ಉಂಟಾಗಿದೆ ಎಂಬುದಕ್ಕೆ ಏನೂ ಸಂದೇಹವಿಲ್ಲ.

ಆದರೆ, ಈ ಸಂದರ್ಭದಲ್ಲಿ ಕೆಲವರು ಮಾಡುತ್ತಿರುವ ಪ್ರಚಾರವು ಮಾತ್ರ ಗಮನಾರ್ಹವಾಗಿದೆ. ಸುಧಾರಣೆಗಳನ್ನು ಪ್ರಜೆಗಳ ಮೇಲೆ ಕರುಣೆಯಿಟ್ಟು ಶ್ರೀಮನ್ಮಹಾರಾಜರು ದಯಪಾಲಿಸಿರುತ್ತಾರೆಂದೂ, ಕಾಜಿಭಕ್ತಿಯುತರಾಗಿ ಈ ಸುಧಾರಣೆಗಳನ್ನು ಅಂಗೀಕರಿಸಿ, ಯಶಸ್ವಿಯಾಗಿ ನಡೆಸಬೇಕೆಂದೂ, ಆಗಾಗ ಹೇಳುತ್ತಿರುವುದೊಂದು ಕೇಳಿಬರುತ್ತಿದೆ. ಇದರಲ್ಲಿ ಸತ್ಯಾಂಶವು ಸ್ವಲ್ಪ ಮಾತ್ರ ಇರುವದಾದರೆ ಆ ಸತ್ಯವು ಮಿತಿಮೀರಿದ ಪರಿಮಾಣದಲ್ಲಿದೆ.

" ನಾವು ಕೊಡುವ ಸುಧಾರಣೆಗಳು ಇಷ್ಟ. ಇವುಗಳನ್ನು ನೀವು ಸರಿಯಾಗಿ ನಡೆಸಿಕೊಂಡು ಬನ್ನಿರಿ. ಇದಕ್ಕಿಂತ ಹೆಚ್ಚಾಗಿ ನಾವು ಏನನ್ನೂ ಕೊಡುವದಕ್ಕಾಗುವದಿಲ್ಲ " ಎಂದು ಶ್ರೀಮನ್ಮಹಾರಾಜರು ಹೇಳಿಲ್ಲ. ಶ್ರೀಮನ್ಮಹಾರಾಜರು ಧರ್ಮಪ್ರಭುಗಳು. ಮೆಲಾಗೆ ಪ್ರಜಾವತ್ಸಲರು. ತಮ್ಮ ಪ್ರಜೆಗಳು ಅಡಳಿತದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರುವದನ್ನು ಕಂಡರೆ ಅವರಿಗೆ ಅಪಾರವಾದ ಸಂತೋಷ ಉಂಟಾಗುವದು. ಪ್ರಜೆಗಳು ಕೇಳಿದುದನ್ನು ' ಇಲ್ಲ ' ಎಂದು ಹೇಳುವ ಸ್ವಭಾವವು ಅವರಿಗೆ ಇರುವದಿಲ್ಲ. ಸಂಸ್ಥಾನದಲ್ಲೆಲ್ಲಾ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿರುವ ಚಳುವಳಿಯನ್ನು ಗಮನಿಸಿ " ನಿಮಗೆ ಏನೇನು ಬೇಕೆಂಬುದನ್ನು ನೀವೇ ಆಲೋಚನೆ ಮಾಡಿ ನಮಗೆ ತಿಳಿಸಿರಿ " ಎಂದು ಹೇಳಿ, ಅದಕ್ಕಾಗಿಯೇ ರಾಜಕೀಯ ಸುಧಾರಣಾ ಸಮಿತಿಯನ್ನು ನಿರ್ಮಿಸಿದರು. ಸಮಿತಿಯವರು ಸಮಾಲೋಚನೆ ನಡೆಸಿ ಏನೇನು ಬೇಕೆಂದು ಹೇಳಿರುತ್ತಾರೆಯೋ ಅದಕ್ಕೆ ಶ್ರೀಮನ್ಮಹಾರಾಜರು ಸಾಧಾರಣವಾಗಿ ಅವುಗಳೆಲ್ಲವನ್ನೂ ' ಅಸ್ತು ' ಎಂದು ಅಪ್ಪಣೆ ಕೊಡಿಸಿದ್ದಾರೆ.

ಆದುದರಿಂದ ವಸ್ತುತಃ ಈ ಸುಧಾರಣೆಗಳನ್ನು ಶ್ರೀಮನ್ಮಹಾರಾಜರು ಪ್ರಜೆಗಳ ಮೇಲೆ ಕರುಣೆಯಿಟ್ಟು ಅನುಗ್ರಹಿಸಿರುವದು ನಿಜವಾದರೂ, ಅವರು ತಮ್ಮಲ್ಲಿ ತಾವೇ ಯೋಚಿಸಿ, ತಮಗೆ ತೋರಿದ್ದನ್ನು ಕೊಡುವ ಬದಲಿಗೆ ಸುಧಾರಣಾ ಸಮಿತಿಯ ಮೂಲಕ ಬಂದಿರುವ ಪ್ರಜೆಗಳ ಬೇಡಿಕೆಯನ್ನು ಸಿಲ್ಲಿಸಿರುತ್ತಾರೆ. ರಾಜಕೀಯ ಸುಧಾರಣಾ ಸಮಿತಿಯವರು ಎಷ್ಟು ಹೆಚ್ಚು ಸುಧಾರಣೆಗಳನ್ನು ಶಿಫಾರಸ್ಸು ಮಾಡಿದ್ದರೂ ಅವುಗಳನ್ನು ಕೊಡುವುದಕ್ಕೆ ಶಿಫಾರಸ್ಸು ಮಾಡಿದ್ದರೂ ಅವುಗಳನ್ನು ಕೊಡುವುದಕ್ಕೆ ಶ್ರೀಮನ್ಮಹಾರಾಜರು ಸ್ವಲ್ಪವೂ ಹಿಂತೆಗೆಯುತ್ತಿರಲಿಲ್ಲವೆಂಬುದನ್ನು ಒತ್ತಿಹೇಳುವೆವು.

ಆದುದರಿಂದ ಈಗ ಬರಬಹುದಾದ ಸುಧಾರಣೆಗಳಲ್ಲಿ ಜನಗಳು ಹೆಚ್ಚು ಆಸಕ್ತಿಯಿಂದ ಕೆಲಸಗಳನ್ನು ನಡೆಸಿ, ಆಗ ಅದರಲ್ಲಿ ಕಂಡುಬರಬಹುದಾದ ನ್ಯೂನಾತಿರಿಕ್ತಗಳನ್ನು ಜನಗಳ ಮುಂದೆ ಇಡುವುದು ಉತ್ತಮ ಮಾರ್ಗವು.

ಆನಂದವಿಹಾರ ನಂ. ೮

ಬಹುಮಾನ ಪಡೆದವರು

ಸರಿಯಾದ ಉತ್ತರಕ್ಕೆ ರೂ. 20 ಬಹುಮಾನೆ ಕೊಡಲಾಗಿದೆ.

ಕೆ. ಎಸ್. ನಾರಾಯಣಸ್ವಾಮಿ, ಮೈಸೂರು.

1 ತಪ್ಪಿನ ಉತ್ತರಕ್ಕೆ ತಲಾ ರೂ. 2 ಬಹುಮಾನ ಕೊಡಲಾಗಿದೆ

ಹೆಚ್. ಎಸ್. ನಂಜಮ್ಮ, ಟಿ. ನರಸೀಪುರ ; ಎಸ್, ರಾಮುರಾವ್, ಮಿಸ್ ಕಮಲ; ಸಿ. ಗೋವಿಂದರಾವ್, ಜಿ, ನರಸಿಂಹಮೂರ್ತಿ.

2 ತಪ್ಪಿನ ಉತ್ತರಕ್ಕೆ ತಲಾ ರೂ. 1 ಬಹುಮಾನ ಕೊಟ್ಟಿದೆ.

ಜಿ. ಗೋಪಾಲಸ್ವಾಮಿ, ಮಿಸ್ ಕೃಷ್ಣಕುಮಾರಿ, ಪಿ. ಸುಬ್ಬರಾವ್. ಆರ್. ಶ್ರೀನಿವಾಸಮೂರ್ತಿ, ಶ್ರೀ ಕೆ. ಶಾರದಮ್ಮ, ಮೈಸೂರು.

3 ತಪ್ಪಿನ ಉತ್ತರಗಳಿಗೆ ತಲಾ 8 ಆಣೆ ಬಹುಮಾನ ಕೊಡಲಾಗಿದೆ.

ಎಸ್. ಎಕ್. ಅಯ್ಯಂಗಾರ್, ಕಡಕೊಳ ಜಿ. ವೇಣುಗೋಪಾಲರಾಜೇ ಅರಸ್. ಎಸ್ ಕೆ. ಸ್ವಾಮಿ, ಮೂಗೂರು. ಸೀತಾರಾಮ ಜೋಯಿಸರು. ಬಿ. ಎಕ್. ಫಡಕೆ, ಎಸ್. ಮಹೇಶ್ವರ ಬಿ. ಬಾಲಕೃಷ್ಣರಾವ್ ಮೈಸೂರು.

4 ತಪ್ಪಿನ ಉತ್ತರವನ್ನು ಕಳುಹಿಸಿದವರು ಮುಂದಿನ ನಂ- 9 ನೇ ಸ್ಪರ್ಧೆಗೆ ಒಂದೊಂದು ಫ್ರೀ ಎಂಟ್ರಿ ಕಳುಹಿಸಲು ಅವಕಾಶವನ್ನು ಕೊಡಲಾಗಿದೆ.

ವಿ. ಎಸ್. ಕಸ್ತೂರಿರಂಗಾಚಾರ್ ಎಂ. ರಂಗಸ್ವಾಮಿ. ಹೆಚ್. ಜಿ. ಗೋಪಾಲರಾಜೇ ಅರಸ್, ಕೆ, ಎಂ, ರೇವಣಾರಾಧ್ಯ. ಮಿಸೆಸ್ ಹೆಚ್. ಜಿ. ಸುಬ್ರಹ್ಮಣ್ಯರಾಜೇ ಅರಸ್, ಕೆ. ವಿ, ಪದ್ಮಾವತಿದೇವಿ. ಎಸ್. ಆರ್. ಸುಬ್ಬಕೃಷ್ಣಯ್ಯ, ಎಕ್, ಆರ್. ವಿ, ಜೆಲಕ್. ಜಿ. ಸುಬ್ರಹ್ಮಣ್ಯರಾಜೇ ಅರಸ್, ಎ ಡಿ. ರಾಮುರಾಜೇ ಅರಸ್, ಮಿಸ್ ಎಸ್. ಕೆ. ಸಾಕು, ಹೆಚ್. ಎಸ್. ಆನಂದರಾವ್, ಕೆ. ಎಸ್. ಸತ್ಯನಾರಾಯಣರಾವ್. ಮಿಸ್ ಜಯಮ್ಮ, ಮೈಸೂರು - ಎಸ್. ಎಕ್. ಐಯ್ಯಂಗಾರ್, ಮೈಸೂರು.

ನಂ. 9 ನೇ ಸ್ಪರ್ಧೆಯು ಮುಂದಿನ ವಾರ ಪ್ರಕಟಿಸಲಾಗುತ್ತೆ.

ಬಹುಮಾನಗಳು ಸುಲದಿನ ವಾರದ ನಂತರ ಏರ್ಪಾಟುಮಾಡಲಾಗುವದು.

ಮ್ಯಾನೇಜರ್.

ಹಾಲೆಂಡಿನ ರಾಣಿಯವರು ಸುರಕ್ಷಿತವಾಗಿ ಇಂಗ್ಲೆಂಡನ್ನು ತಲುಪಿದರು.

ಈ ವಾರದ ಭವಿಷ್ಯ

ಮೇಷ

ಜನ್ಮದಲ್ಲಿರುವ ಗುರು ಶನಿಗಳಿಂದ ಏನೂ ಅನುಕೂಲ ದೊರಯುವುದಿಲ್ಲವಾದರೂ, ತೃತೀಯ ಸ್ಥಾನದಲ್ಲಿ ಬಂದು ಕುಳಿತಿರುವ ಮಂಗಳನಿಂದ ಮಂಗಳವಾಗುವುದು. ಸ್ವಲ್ಪ ಹಣಕಾಸು ಓಡಾಡುತ್ತೆ. ಬಂಧುಬಳಗದವರೂ ಸ್ನೇಹಿತರೂ ನಿಮ್ಮ ಹತ್ತಿರ ಓಡಾಡುತ್ತಾರೆ.

ವೃಷಭ

ವೃಷಭ— ನಿಮಗೆ ಗ್ರಹಗತಿಗಳು ಜೆನ್ನಾಗಿಲ್ಲವೆಂದು ಹೇಳಿದರೆ ಕೋಪಿಸಿಕೊಳ್ಳುವಿರೋ ಏನೋ ? ಎಂದು ಭಯವಾಗುತ್ತೆ. ಬಾಕಿ ಗ್ರಹಗಳಿಂದ ಏನೇನು ತೊಂದರೆ ಬಂದರೂ ಸಹಿಸಿಕೊಳ್ಳಿ. ದ್ವಿತೀಯ ಸ್ಥಾನದಲ್ಲಿರುವ ಶುಕ್ರ ನಿಮ್ಮ ಸೌಖ್ಯದ ಕಡೆ ಸ್ವಲ್ಪವಾದರೂ ಲಕ್ಷ್ಯ ಕೊಡುತ್ತಾನೆ.

ಮಿಥುನ

ನಿಮಗೆ ಸ್ವಲ್ಪ ಪ್ರವಾಸ ಒದಗುವದು. ಜನರಲ್ಲಿ ಸ್ವಲ್ಪ ಹುಷಾರಿನಿಂದ ವರ್ತಿಸಿರಿ, ಸ್ವಪರ ಜನರ ಮನ್ನಣೆಗೆ ಕಡಮೆಯಿಲ್ಲ. ಒಳ್ಳೇ ಯಶಸ್ಸಿನ ಕಾಲ, ಮಣ್ಣು ಹಿಡಿದರೂ ಚಿನ್ನವಾಗುವ ಕಾಲವನ್ನು ದಯಪಾಲಿಸಿರುವ ಪರಮಾತ್ಮನನ್ನು ವಂದಿಸಿರಿ.

ಕರ್ಕಾಟಕ

ಶುಕ್ರ ಅಂಗಾರಕರು ಚಿಕ್ಕಚಿಕ್ಕ ಪ್ರವಾಸ ಮಾಡಿಸುತ್ತಾರೆ. ಸ್ವಲ್ಪ ದುಡ್ಡಿನ ಮುಖವನ್ನೂ ನೋಡಬಹುದು.

ಸಿಂಹ

ಸುಖಸಂತೋಷದಿಂದಿರುವಿರಿ. ಜನರಲ್ಲಿ ಒಳ್ಳೇ ಯಶಸ್ಸು ದೊರೆಯುತ್ತೆ. ದೇವತಾಗುರು ಭಕ್ತಿ ಜೆನ್ನಾಗಿದೆ. ಅನುಕೂಲ ಕಾಲವೇ ಸರಿ.

ಕನ್ಯಾ

ಎಲ್ಲಾ ಗ್ರಹಗಳೂ ನಿಮ್ಮ ವಿರುದ್ಧವಾಗಿ ನಿಂತಿದ್ದಾರಲ್ಲಾ- ನವಗ್ರಹ ಪೂಜೆ ಮಾಡಿಸಿ. ಕ್ಷೇಮವಾಗುತ್ತೆ. ಜನರಲ್ಲಿ ನಿಷ್ಠೂರಕ್ಕೆ ಹೋಗಬೇಡಿ ಉಪಾಯದಿಂದ ಕಾಲ ತಳ್ಳಿ. ಭಗವಂತನ ಧ್ಯಾನ ಮಾಡುತ್ತಿರಿ.

ತುಲಾ

ನಿಮಗೆ ಸುತ್ತಾಟ ಇದ್ದೇ ಇದೆ. ಅದರಿಂದ ಸ್ವಲ್ಪ ಖಾಯಿದೆ ಆಸ್ತಿ. ಸುಖ ಕಾಲವಾಗಿದೆ. ನಿಮ್ಮ ಆರೋಗ್ಯವು ಜೆನ್ನಾಗಿರುತ್ತೆ. ಆರ್ಥಿಕ ಅಡಚಣೆಯಿಂದ ಪಾರಾಗುತ್ತೀರಿ.

ವೃಶ್ಚಿಕ

ಜನರಲ್ಲಿ ಕಲಹವಾಡಬೇಡಿ. ಒಳ್ಳೇ ಮನಸ್ಸಿನಿಂದ ವರ್ತಿಸಿ. ಅಲ್ಪಸ್ವಲ್ಪ ತೊಂದರೆಗೆ ಸಿಕ್ಕುತ್ತೀರಿ. ಹುಷಾರಾಗಿರಿ.

ಧನು

ಪತ್ನೀಪುತ್ರರಿಂದ ಏನೂ ಅಷ್ಟೇನೂ ಸುಖವಿಲ್ಲ. ಹಣಕಾಸಿನ ಪರಿಸ್ಥಿತಿ ಕಠಿಣವಾಗಿದ್ದರೂ, ಅಲ್ಪಸ್ವಲ್ಪ ಕೈ ಸೇರಿ ಮಾನಮರ್ಯಾದೆ ಉಳಿಯುವುದು. ಆದರೆ ಸ್ಥಿತಿಗತಿಗಳು ಜೆನ್ನಾಗಿಲ್ಲ.

ಮಕರ

ಸತ್ಪುರುಷರ ಸಹವಾಸ ದೊರೆಯುವದು. ಪ್ರಯತ್ನಿಸಿದ ಕಾರ್ಯದಲ್ಲಿ ತಕ್ಕಮಟ್ಟಿಗೆ ಪ್ರಯೋಜನವುಂಟು. ಸಾರ್ವಜನಿಕ ಸೇವೆಯು ಮೇಲೂ, ವಿದ್ಯಾಪ್ರಚಾರದ ಮೇಲೂ ಉತ್ಸಾಹ ಹೆಚ್ಚುವುದು.

ಕುಂಭ

ಮನಸ್ಸಿನಲ್ಲಿ ಕೆಲಸಕಾರ್ಯ ವಿಷಯದಲ್ಲಿ ಸ್ವಲ್ಪ ಬೇಜಾರು ಹುಟ್ಟುತ್ತೆ. ಚಿಂತೆಯೂ ತಕ್ಕಮಟ್ಟಿಗೆ ಆವರಿಸಿದೆ. ಈ ವಾರ ನೀವು ಬಯಸಿದ ಕಾರ್ಯಗಳು ಸ್ವಲ್ಪ ಕೈಗೂಡಿ ಹರ್ಷಗೊಳ್ಳುವಿರಿ.

ಮೀನ

ಸೂರ್ಯನ ಬೆಂಬಲವು ದೊರಕಿದೆ. ರಾಜಕೀಯ ಜನರಿಂದ ಸಹಾಯವುಂಟು. ಮನೆಯಲ್ಲಿ ಶುಭಕಾರ್ಯ ನಡೆಯುವ ಪ್ರಸಂಗವಿದೆ. ಸ್ವಪರಜನರಿಂದ ಮನ್ನಣೆ, ಚತುರ್ಥ ಸ್ಥಾನದಲ್ಲಿರುವ ಅಂಗಾರಕನನ್ನು ಪ್ರೀತಿ ಮಾಡಿ. ತೊಗರಿಬೇಳೆ ದಾನ ಮಾಡಿ, ಹುತ್ತಕ್ಕೆ ಹಾಲು ಬಿಡಿ, ಒಳ್ಳೇದು.

ಮಂಜು ಹೊಗೆಯಂತೆ ಆವರಿಸಿರುವಾಗ ಯಾವ ಪದಾರ್ಥವೂ ನಮ್ಮ ಕಣ್ಣಿಗೆ ಕಾಣಬರುವುದಿಲ್ಲವಷ್ಟೆ. ಅಂಥಾ ಸಮಯಗಳಲ್ಲಿ ದೃಷ್ಟಿ ಲೋಪವುಂಟಾಗದಂತಿರಲು ಅಮೆರಿಕದ ಗೈಬಾಲು ಎಂಬಾತನ ಟೆಲಿವಿಷ್ಟ್ ಯಂತ್ರವನ್ನು ಹೋಲುವ ಒಂದು ಯಂತ್ರವನ್ನು ಕಂಡುಹಿಡಿದಿರುವನು. ಈ ಸಾಧನೆಯು ವಿಮಾನಗಳು ಸುನಾಯಾಸವಾಗಿ ಹಾರಲು ಸಹಾಯಮಾಡುತ್ತದೆ.

ಕಚ್ ರಾಷ್ಟ್ರದ ಮರುಭೂಮಿಯಲ್ಲಿ ಕೆಂಪುಬಣ್ಣದ ಬಾತುಗಳು ಇರುವವೆಂದೂ ನೇಷನಲ್ ಹಿಷ್ಟರಿ ಸೊಸೈಟಿಯವರ ಪರಿಶೋಧನೆಯಿಂದ ತಿಳಿಯಬಂದಿದೆ.

ವಾರ್ತಾತರಂಗ

ಆಗ್ರಾ ಕಲಕ್ಟರರ ಸಮ್ಮುಖದಲ್ಲಿ ಒಬ್ಬ ಶ್ಯಾನುಭೋಗನು ಗಾಂಧಿ ಟೋಪಿಯನ್ನು ಧರಿಸಿ ಕಾಣಿಸಿಕೊಂಡಾಗ ಈ ಟೋಪಿಯನ್ನು ಏಕೆ ಧರಿಸಿದಿ ಎಂದು ಪ್ರಶ್ನಿಸಿ ಸಂಜಾಷಿಯನ್ನು ಕೋರಲಾಗಿ, ಶ್ಯಾನುಭೋಗನು ಬರಹದಲ್ಲಿ ಸಂಜಾಷಿಯನ್ನು ಕೊಟ್ಟಿರುವನು.

ಂ ಂ

ಇಂಗ್ಲೆಂಡಿನಲ್ಲಿ ಗೆಜಿಟ್ಟನ್ನು ಮುದ್ರಿಸಲು ಆರಂಭಿಸಿದ್ದು ೧೬೬೬ ರಲ್ಲಿ ಇದು ಅತಿ ಪ್ರಾಚೀನವಾದದ್ದು ಆದರೂ ಅದರಲ್ಲಿ ತಾತ್ಕಾಲಿಕ ವಿಷಯಗಳು ಆಗಿಂದಾಗ್ಯೆ ಪ್ರಚಾರವಾಗುವುದಿಲ್ಲ.

ಂ ಂ

ಯುದ್ಧದಲ್ಲಿ ಭಾಗವಹಿಸಿರುವವರು ಸಕಾಲದಲ್ಲಿ ಇಷ್ಯೂರೆನ್ಸು ಪ್ರೀಮಿಯಂ ಸಲ್ಲಿಸಲಾಗದಾದುದರಿಂದ ಯುದ್ಧಾನಂತರ ಬಡ್ಡಿಯಿಲ್ಲದೆ ಪ್ರೀಮಿಯಂಗಳನ್ನು ಸಲ್ಲಿಸಲು ಇಂಗ್ಲೆಂಡಿನಲ್ಲಿ ಏರ್ಪಾಟುಮಾಡುತ್ತಿರುವರು.

ಂ ಂ

ಅಮೆರಿಕದಲ್ಲಿ ಯಗರಂಸೀಯಲ್ಲಿ ಒಬ್ಬ ಮನುಷ್ಯನನ್ನು ರೈಲ್ವೆ ಪಾರ್ಸೆಲಿನಂತೆ ಪೆಟ್ಟಿಗೆಯಲ್ಲಿಟ್ಟು ಅಲ್ಡರ್ನಿಗೆ ರೈಲಿನಲ್ಲಿ ರವಾನೆಮಾಡಿದರು. ಆತನ ಹೆಸರು ಮೇಜರ್ ಪಾವ್ರಿ ಎಂದು. ತನ್ನ ಹೆಂಡತಿಯಿದ್ದ ಊರಿಗೆ ಜರೂರಾಗಿ ಹೋಗಲು ಯತ್ನಿಸಲು ರೈಲಿನಲ್ಲಿ ಪ್ರಯಾಣಿಕರ ಗಾಡಿಯಲ್ಲಿ ಸ್ಥಳವು ಲಭಿಸಲಿಲ್ಲವಾದುದರಿಂದ ರೈಲ್ವೆ ಪಾರ್ಸೆಲ್ ಮಾಡಿಕೊಂಡು ಆಲ್ಡರ್ನಿಗೇಗೆ ತಲಪಿದನು.

ಂ ಂ

ಪ್ರಪಂಚದಲ್ಲಿಯ ಎಲ್ಲಾ ದೇಶಗಳಲ್ಲಿಯೂ ಕ್ರಮೇಣ ಉಷ್ಣವು ಹೆಚ್ಚುತ್ತಿರುವದೆಂದು ಅಮೆರಿಕನ್ ವಾತಾವರಣ ಶಾಸ್ತ್ರಜ್ಞರು ವಾಷಿಂಗ್ಟನ್ನಿನಲ್ಲಿ ಕಂಡುಹಿಡಿದಿರುವರು. ಅಪರಿಮಿತ ಚಳಿಯುಳ್ಳ ಸೈಬೀರಿಯಾದಲ್ಲಿ ಕೂಡ ಹಿಂದೆ ಇದ್ದಷ್ಟು ಚಳಿಯು ಈಚೆಗೆ ಇಲ್ಲವೆಂದು ಪರಿಶೋಧದೆಯಿಂದ ನಿರ್ಧರಿಸಿರುವರು. ಒಂದು ಸ್ಥಳದಲ್ಲಿ ಈಚೆಗೆ ೧೩೬ ಡಿಗ್ರಿಗಳ ಉಷ್ಣವು ಕಂಡುಬಂದಿತು.

ಂ ಂ

ಶ್ರೀ ಭೂಪತಿ ಸೇಗುಪ್ತ ಎಂಬ ಅಂಧನು ಕಲ್ಕತ್ತಾ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ವಹಿಸಿರುವನೆಂದೂ ತಿಳಿಯಬಂದಿದೆ.

ಚಲನ ಚಿತ್ರ ತರಂಗ

ಬೊಂಬಾಯಿನ ಹಿಂದೀ ಮರಾಠಿ ಭಾಷೆಯನ್ನು ಮಾತನಾಡುವ ಸಿನಿಮಾ–ಪ್ರೇಮಿಗಳನ್ನು ಹರ್ಷಗೊಳಿಸಲು, ಪ್ರಭಾತರವರು ತಮ್ಮ ಹಿಂದೀ ಮರಾಠಿ ಭಾಷೆಯ 'ಧ್ಯಾನೇಶ್ವರ' ಚಿತ್ರವನ್ನು ಒಟ್ಟಿಗೆ ಪ್ರತಿ ದಿವಸವೂ ಪ್ರದರ್ಶಿಸುವ ಹಾಗೆ ಏರ್ಪಾಡು ಮಾಡಿದ್ದಾರೆ.

ಂ ಂ

ಅರುಣ ಪಿಕ್ಚರ್ಸಿನ ಬಾಲ್. ಜಿ. ಪೆಂದಾರ್‌ಕರ್ ರವರು ಸಮರ್ಥ್ ಸಿನೆಟೋನಿನ ಸ್ಟೂಡಿಯೋವನ್ನು 16, 000 ರೂಗಳಿಗೆ ಕೊಂಡು ಕೊಂಡರು.

ಂ ಂ

ಮಿ|| ಶಾಂತಾರಾಂ ರವರು ತಮ್ಮ 'ಪಡೋಸಿ' ಚಿತ್ರವನ್ನು ಇಂಗ್ಲೀಷ್‌ನಲ್ಲಿಯೂ ಕೂಡ ಚಿತ್ರಿಸುತ್ತಾರೆಂತ ತಿಳಿದು ಒಂದಿದೆ.

ಂ ಂ

ಜಪ್ಸ್ ಸಂಗೀತ ಸಭಾದವರು ದೆಕ್ಷಿಣ ಭಾರತದ ರೇಡಿಯೋ ತಾರೆಯಾದ ಶ್ರೀಮತಿ ಎಮ್. ಎಸ್. ಸುಬ್ಬಲಕ್ಷ್ಮಿಯವರು ಆಲ್ ಇಂಡಿಯಾ ರೇಡಿಯೊದಲ್ಲಿ ಕರ್ನಾಟಕ ಸಂಗೀತವನ್ನು ಹಾಡಿದ್ದಕ್ಕಾಗಿ, ಗೌರವಾರ್ಥವಾಗಿ ಒಂದು ಚಿನ್ನದ ಮೆಡಲನ್ನು ಬಹುಮಾನವಾಗಿ ಕೊಟ್ಟಿರುವರು.

ಂ ಂ

ನವಯುಗ ಚಿತ್ರಪಠದವರು ಸಧ್ಯದಲ್ಲೆ ಸತಿ. ವಿಾರಾಬಾಯಿ ಎಂಬ ಚಿತ್ರವನ್ನು ತಯಾರಿಸುವರು. ಇವರ ಕಥೆಯನ್ನ ಮಿ|| ಪಿ. ಕೆ. ಅತ್ರೆಯವರು ಬರೆದಿರುತ್ತಾರೆ.

ನಕ್ಕ ಹಲ್ಲು .....!

ಹೋಟಲಿನ ಮಾಲೀಕ—ಏನ್ರೀ ಬೇಕು ?

ರೈತ— ಏನು ಕೊಡ್ತೀರಾ ?

ಮಾಲೀಕ— ಬಾಸುಂದಿ, ಇಡ್ಲಿ, ದೋಸೆ ಮುಂತಾದುವುಗಳು ಇವೆ. ಯಾವದನ್ನು ಕೊಡಲಿ.

ರೈತ— ಬಾಸುಂಡೆ ಕೊಡಿ !

ಂ ಂ

ಶಾಸ್ತ್ರಿ— ಜೋಡು, ಪಂಜೆ, ಕೂಡೆ ಇಷ್ಟೆಲ್ಲಾ ಕೊಡಬೇಕು.

ಹುಡುಗ—ಯಾರನ್ನ ಕೊಡೆ ಅಂತೀರಿ.

ಂ ಂ

ವೈಷ್ಣ್ಯ—ಒಂದಕ್ಕೆ ಮೂರು ಸೇರಿಸಿದರೆ ನಾಲ್ಕು ಆಗುತ್ತೆ. ಎಷ್ಟಕ್ಕೆ ಎಷ್ಟು ಸೇರಿಸಿದರೆ. ಎಂಟು ಆಗುತ್ತೆ.

ಹುಡುಗ— ಅಷ್ಟಕ್ಕೆ ಅಷ್ಟು ಸೇರಿಸಿದರೆ ಅಷ್ಟೇ ಆಗುತ್ತೇ ಸಾರ್.

[ಎಸ್. ಆರ್. ಕೃಷ್ಣಸ್ವಾಮಿ

ಬಾಲಪ್ರಪಂಚ

ಎಸ್. ಆರ್. ಕೃಷ್ಣಸ್ವಾಮಿ

ಮಕ್ಕಳಿರಾ !

ಇಂದು ನೀವು ಮಕ್ಕಳು. ನಾಳೆ ನೀವೇ ಪ್ರಜೆಯಾಗುತ್ತೀರಿ. ಇಂದು ನಿಮಗೆ ಕಲಿಸಿದ ನೀತಿ ಮುಂದಕ್ಕೆ ಬರುತ್ತದೆ. "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ" ಇಲ್ಲ. ಎಂದಿಗೂ ಇಲ್ಲ. ಅಂತೆಯೇ ಇಂದು ನೀವೆಲ್ಲರೂ ಒಳ್ಳೆಯ ಜ್ಞಾನಸಂಪಾದಿಸಿ, ಮುಂದೆ ನಮ್ಮ 'ಕನ್ನಡ ನಾಡನ್ನು' ಮುಂದಕ್ಕೆ ತರುವಿರಿ.

ಮಕ್ಕಳ ಆಸೆ, ಕಥೆ ಕೇಳುವುದು. ಕೇಳಿ ಆ ಸಮುದ್ರದ ಹಡಗಿನಲ್ಲಿ ಸಂಚಾರಮಾಡಿ, ಅದರಲ್ಲಿ ಉಂಟಾಗುವ ಸಂತೋಷವನ್ನು ಅನುಭವಿಸಿ.

ಕಥೆ

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

ಒಂದೂರು. ಆ ಊರಿನಲ್ಲಿ ಎಂಬತ್ತು ಮನೆಯಿತ್ತು. ಅಲ್ಲಿ ಇಬ್ಬರು ಬ್ರಾಹ್ಮಣರು ಮಾತ್ರ ದೈವಭಕ್ತಿಯಿಂದಲೂ ಸದಾಚಾರ ಸಂಪನ್ನರಾಗಿದ್ದರು ಉಳಿದವರಲ್ಲಿ ಎಂಟು ಹತ್ತು ಜನ ಬ್ರಾಹ್ಮಣರ ಮನೆಯು ಈಗಿನ ಕಾಲದ ಆಡಂಬರವನ್ನು ಹೊಕ್ಕಿತ್ತು. ಉಳಿದ ಮನೆ ಇತರ ಜಾತಿಯವರದು.

ಇಬ್ಬರು ಬ್ರಾಹ್ಮಣರೂ, ಒಂದೇ ಬೀದಿಯಲ್ಲೆ ಇದ್ದರು ಅವರು ಶಂಕರ, ಶ್ರೀಕಂಠ

ಶಂಕರನಿಗೆ ರಾಮು ಎಂಬ ಮಗನೂ ಶ್ರೀಕಂಠನಿಗೆ, ಶಾಮು ಎಂಬ ಮಗನೂ ಇದ್ದರು. ಆದರೆ, ಶಂಕರ, ರಾಮುವಿಗೆ ಬಾಲ್ಯದಲ್ಲೇ ವೇದಾಭ್ಯಾಸ ಮಾಡಿಸಿದ. ಆದರೆ ಶ್ರೀಕಂಠನು ಮಗನ ಮೋಹಕ್ಕೆ ಸಿಕ್ಕಿ ಶಾಮುನಿಗೆ ಸರಿಯಾದ ನಡತೆಯನ್ನು ಕಲಿಸಲಿಲ್ಲ. ರಾಮು, ಶಾಮು ಇಬ್ಬರೂ ಮುಂದಕ್ಕೆ ಬರುವರೆಂದು ಊರಿನ ಭಾವನೆಯಿತ್ತು. ಆದರೆ ರಾಮುನ ಬಾಲ್ಯದ ಶಿಕ್ಷಣದಿಂದ ಅವನು ಮುಂದಕ್ಕೆ ಬಂದನು. ಶಾಮುನು ಬರಲಿಲ್ಲ. ಈಗ ತಂದೆ ಬಹಳ ಕಷ್ಟಪಟ್ಟು ಆದರೆ ಫಲವೇನು? ಏನೂ ಇಲ್ಲ. ಪಾಪ ಶ್ರೀಕಂಠನ ಹಿಂದಿನ ಮಗನ ವಿಶ್ವಾಸವು ಇಂದು ಇಲ್ಲ. ಶಾಮು ಇಂದು ಒಲಿತ ಮನುಷ್ಯ. ಹೇಳಲು ಯಾರಿಗೂ ಧೈರ್ಯವಿಲ್ಲ. ಆವಿವೇಕಿಯಾದ ರಾಮುನೆಂಬ ಸಸಿಯನ್ನು ಗಿಡದಲ್ಲೇ ಬಗ್ಗಿಸಿದರು. ಆದರೆ ಶಾಮುನನ್ನು ಚಿಕ್ಕಂದಿನಲ್ಲಿ ಸರಿಯಾದ ದಾರಿಗೆ ತರಲಿಲ್ಲವಾಗಿ ದೊಡ್ಡವನಾದಾಗ ಬಗ್ಗಿಸುವುದಕ್ಕಾಗುತ್ತದೆಯೇ ?

ಮಕ್ಕಳಿರಾ ! ಈ ಕಥೆಯ ಅರ್ಥ ತಿಳಿಯಿತೆ. ತಿಳಿಯದಿದ್ದರೆ ನಿಮ್ಮ ದೊಡ್ಡವರಿಂದ ಕೇಳಿ ತಿಳಿದುಕೊಳ್ಳಿ. ನೀವು 'ಶಾಮು' ನಂತೆ ಆಗುವಿರೋ, ರಾಮುನಂತೆ ಆಗುವಿರೋ? ಹೇಳಿ.

ವಿನೋದ ಲಹರಿ

ನಟಯಜಮಾನ— ಏಕಯ್ಯ ನನ್ನ ಹೆಂಡತಿಗೆ ಮುತ್ತುಕೊಟ್ಟದ್ದು ?

ನಟ—ನನ್ನದೇನು ತಪ್ಪು ನಿರ್ದೇಶಕ ಹೇಳಿದಹಾಗೆ ಮಾಡಿದೆ.

ಂ ಂ

ಟೋಪಿ ವ್ಯಾಪಾರಿ—ಇಲ್ಲರಿ ಒಂದು ಸಲ ಟೋಪಿ ಹಾಕಿದರೆ ಸರಿಹೋಗುತ್ತರಿ.

ಗಿರಾಕಿ—(ಗಾಬರಿಯಾಗಿ) ಏನರಿ ನಿಮ್ಮ ಅಂಗಡಿಗೆ ಇದು ಮೊದಲನೆ ಸಲ ಬರುತ್ತಿರುವುದು; ಈವಾಗಲೇ ಮೋಸಮಾಡಿದರೆ ಮುಂದೆ ನಿಮ್ಮ ಅಂಗಡಿಗೆ ಯಾರು ಬರುತ್ತಾರರಿ ?

ಂ ಂ

ಪುರೋಹಿತ ಏಕಯ್ಯ ಎರಡೇ ಪಿಂಡ ಕಟ್ಟಿದ್ದು ?

ಶಿಷ್ಯ—ನೀವು ಬ್ರಾಹ್ಮಣರು ಇರುವುದು ಇಬ್ಬರುತಾನೇ?

ಪುರೋಹಿತ —- (ಸಿಟ್ಟಿನಿಂದ) ಅಲ್ಲ ಕಣಯ್ಯ ನಿನ್ನನ್ನು ಲೆಕ್ಕಕ್ಕೆ ಬಿಟ್ಟು ಬಿಟ್ಟಯ್ಯ ನನಗೊಂದು ಕಟ್ಟು.

ಂ ಂ

ಸ್ನೇಹಿತ— ಕೋಟೆಲ್ಲಾ ತೂತಲ್ಲರಿ, ಏನು ಇಲಿಗಿಲಿ ಕಡಿದಹಾಗೆ ಇದೆಯಲ್ಲ !

ಯಜಮಾನರು — ಇಲ್ಲರಿ ಈವಾಗ ಜೇಸಗೆ ಕಾಲವಲ್ಲವೇನರಿ, ವಿಪರೀತ ಸೆಕೆಗಾಳಿಯಾಡಲೆಂತ ನಾನು ಮಾಡಿಸುವ ಮೊದಲೇ ಇಲಿಗಳು ಖರ್ಚಿಲ್ಲದೆ ಮಾಡಿವೆ.

ಂ ಂ

ಗುರು—ನಾನು ಇಷ್ಟು ಪಾಠ ಹೇಳಿದ್ದಕ್ಕೆ ರಂಗ ನಿನ್ನ ಗುರುದಕ್ಷಿಣೆ ಏನು ?

ರಂಗ—ನನ್ನ ಹತ್ತಿರ ಕೊಡುವುದಕ್ಕಾಗುವುದಿಲ್ಲ ಸಾರ್, ನೀವು ಹೇಳುಕೊಟ್ಟದ್ದನ್ನ ವಾಪಾಸು ತೆಗೆದು ಕೊಳ್ಳಿ ಸಾರ್.

ಂ ಂ

ಗಂಡ—ಅಡಿಗೆ ಮಾಡದೆಂ ನನ್ನ ಒಲೆಮುಂದೆ ಕೂರಿಸಿ ಎಲ್ಲಿಗೆ ಹೋಗಿದ್ದೀಯೇ?

ಹೆಂಡತಿ— ಹೋಟಲಿಗೆ ಹೋಗಿ, ಹಾಗೆ ವಾಕಿಂಗ್ ಹೋಗಿದ್ದೆ.

ಂ ಂ

ಸ್ನೇಹಿತ—ಮಾಸೆ ಏಕಯ್ಯ ಬೊಳಿಸಿದೆ ?

ಅವನು— ಏನು ಮಾಡುವುದು ಹೆಂಡತಿ ಹತ್ತಿರ ಸೋತು ಬಿಟ್ಟೆ.

ಎಸ್. ರಾಮಕೃಷ್ಣ.
ಮೈಸೂರು.

ಸ್ತ್ರೀಯರ ಅಧಿಕಾರ

ಜಯಸಲ್ಮೀರು ಸಂಸ್ಥಾನದ ಸರಹದ್ದಿನಲ್ಲಿ ಜಿಪ್ಸಿಗಳೆಂಬ ಒಂದು ಜಾತಿಯ ಲಾಕಡು ಮನುಷ್ಯರಿರುವರು. ಅನಾದಿ ಕಾಲದಿಂದ ಆ ಜಾತಿಯವರಲ್ಲಿ ಎಲ್ಲಾ ಅಧಿಕಾರವೂ ಸ್ತ್ರೀಯರದೇ. ಪುರುಷರು ಸ್ತ್ರೀಯರಿಗೆ ಅಡಿಯಾಳಾಗಿರಬೇಕು. ಸ್ತ್ರೀಯರು ತಮಗೆ ಮನಸ್ಸು ಬಂದ ಪುರುಷರನ್ನು ಮದುವೆಯಾಗಬಹುದು. ಎಷ್ಟುಜನರಿಯಾದರೂ ವಿವಾಹವಿಚ್ಛೇದನ ಮಾಡಿಕೊಳ್ಳಬಹುದು. ಮನೆಗಳಲ್ಲಿ ಹೆಂಡತಿಯ ಮಾತಿಗೆ ಗಂಡನು ಬದಲುಹೇಳಕೂಡದು. ಗಂಡನು ಸಂಪಾದಿಸಿದ ಹಣವನ್ನೆಲ್ಲವನ್ನೂ ಹೆಂಡತಿಗೆ ಕೊಟ್ಟುಬಿಡಬೇಕು. ಏಲ್ಲವನ್ನೂ ಕೊಡದಿದ್ದರೂ, ೩ ನೇ ೧ ಭಾಗವನ್ನು ಕೊಟ್ಟೇ ತೀರಬೇಕು. ಅವರಿಗೆ ಮಕ್ಕಳು ಹುಟ್ಟಿದಾಗ ಅವರು ತಾಯಿಯ ಹೆಸರನ್ನೇ ಹೇಳಬೇಕು. ತಂದೆಯ ಹೆಸರನ್ನು ಹೇಳಕೂಡದು. ಮಕ್ಕಳ ಮೇಲೆ ಅಧಿಕಾರವು ತಾಯಿಗೆ ಹೊರತು ತಂದೆಗಿಲ್ಲ. ಗಂಡನು ತಪ್ಪು ಮಾಡಿದರೆ ಅವನನ್ನು ಹೊಡೆಯುವ ಅಧಿಕಾರವು ಹೆಂಡತಿಗೆ ಇರುತ್ತದೆ. ಆ ಗ್ರಾಂತ್ಯದಲ್ಲಿ ಸ್ತ್ರೀಯರು ಡಿಕ್ಟೇಟರುಗಳಂತೆ ವರ್ತಿಸುತ್ತಾರೆ.

ಶ್ರೀ ಶ್ರೀಕಂಠೇಶ್ವರ ಸುಲಭ ಸ್ಪರ್ಧೆ ನಂ. ೫೪

ಮೊದಲನೆ ಬಹುಮಾನ ರೂ ೧೦ ಇತರ ಬಹುಮಾನ ರೂ ೧೦

ಎಲ್ಲರಿಗಿಂತಲೂ ಹೆಚ್ಚು ಉತ್ತರವನ್ನು ಕಳುಹಿಸಿದವರಿಗೆ 2—8—0 ಸ್ಪೆಷಲ್ ಬಹುಮಾನ

ಒಟ್ಟು ಬಹುಮಾನ ರೂ. ೨೨-೮-೦

ಮಹಾಜನರು ಪ್ರೋತ್ಸಾಹ ಕೊಟ್ಟಂತೆಲ್ಲಾ ಬಹುಮಾನದ ಮೊಬಲಗನ್ನು ಹೆಚ್ಚುಮಾಡಲಾಗುತ್ತೆ. ಪ್ರವೇಶಧನ 1 ಉತ್ತರಕ್ಕೆ 2 ಆಣೆ, 3 ಉತ್ತರಕ್ಕೆ 4 ಆಣೆ ಪ್ರಕಾರ ಎಷ್ಟು ಉತ್ತರಗಳನ್ನು ಬೇಕಾದರೂ ಕಳುಹಿಸಬಹುದು. ಉತ್ತರವು ನಮಗೆ ತಲಪಬೇಕಾದ ಕೊನೆಯ ತಾರೀಖು 27—5—40.

ಸರಿಯಾದ ಉತ್ತರವು 29—5—40 ನೇ " ಸತ್ಯವಾದಿ " ಯಲ್ಲಿ ಪ್ರಕಟಿಸಲ್ಪಡುವುದು.

ನಿಯಮಗಳು— ಶ್ರೀ ಸತ್ಯನಾರಾಯಣ ಜನರಲ್ ಸ್ಟೋರ್ಸಿನಲ್ಲಿ ಮೊಹರುಮಾಡಿ ಇಟ್ಟಿರುವ ಉತ್ತರಕ್ಕೆ ಪ್ರತಿ ಅಕ್ಷರವೂ ಸರಿಹೋಲುವಪಕ್ಕೆ ಮೊದಲನೆ ಬಹುಮಾನವೂ, 1—2 ತಪ್ಪಿರುವುಗಳಿಗೆ ಇತರ ಬಹುಮಾನವೂ ಕೊಡಲಾಗುತ್ತೆ. ಪ್ರವೇಶಧನಕ್ಕೆ ನಗದಾಗಲೀ ಪೋಸ್ಟು ಸ್ಟಾಂಪಾಗಲೀ, ಪೋಸ್ಟಲ್ ಆರ್ಡರಾಗಲೀ ಕಳುಹಿಸಬಹುದು. ಮ್ಯಾನೇಜರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಉತ್ತರಗಳನ್ನು ಬಿಳಿಯ ಕಾಗದದ ಮೇಲೆ ಚಿತ್ತಿಲ್ಲದಂತೆ ಶಾಯಿಯಲ್ಲಿ ಬರೆದು ಕಳುಹಿಸಬಹುದು. ಬಾಕಿ ನಿಯಮಗಳು ಪೂರ್ವಾಲಿಸಂತೆ.

ಮ್ಯಾನೇಜರ್, ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ, ನಂಜನಗೂಡು

ನಂಜನಗೂಡು ಏಜೆಂಟರು— ಎಚ್. ಚಂದ್ರಶೇಖರಯ್ಯ, ಷಾಪ್‌ಕೀಪರ್.

ಮೈಸೂರು ಏಜೆಂಟರು— ಎಸ್. ಆರ್. ಶಾಸ್ತ್ರಿ, ಬಿ. ಎ., ಕಾಫೀರೂಂಸ್, ಚಾಮರಾಜಪುರಂ.



ಹೆಸರು.....

ವಿಳಾಸ.....

.....

ಕೂ. ನಂ..... ಪೋ | ಆ | ನಂ.....

ಎಡದಿಂದ ಬಲಕ್ಕೆ

1 ದೇವಋಷಿ. ೬ ಮನುಷ್ಯನಿಗೆ ಇರ್ದುಸ್ಥರವಲ್ಲ. 4 ಋಷಿಗಳಿಗೆಲ್ಲಾ ಋಷಿ 6 ತಿಥಿಗಳಲ್ಲೊಂದು 8 ಯಾವ ಕೆಲಸಕ್ಕೂ ಇದಿಲ್ಲದಿದ್ದದೆ ಏನೂ ನಡೆಯುವದಿಲ್ಲ. 10 ತರುಣ (ಅಕ್ಷರಪಲ್ಲಟ) 11 ಬಹು ಬೆಲೆ ಬಾಳತಕ್ಕ ವಸ್ತು.

ಮೇಲಿನಿಂದ ಕೆಳಕ್ಕೆ

1 ವಿಷ್ಣುವಾಹನ 2 ಯಜಮಾನ (ಗಂಡ) 5 ಗೆಳಯ (ಸ್ಥಳಪಲ್ಲಟ) 6 ನಮ್ಮ ದೇಶದದಲ್ಲಿ ಒಂದು ರೈಲ್ವೇ ಸ್ಟೇಷನ್. 7 ಸೂರ್ಯ 8 ಸಮುದ್ರದಲ್ಲಿ ಹಡಗು ನಿಲ್ಲುವ ಸ್ಥಳ. 9 ರಕ್ತಸಂಬಂಧಿಗಳಲ್ಲೊಬ್ಬರು.

ಸ್ತ್ರೀಯರ ಅಧಿಕಾರ

ಜಯಸಲ್ಮೀರು ಸಂಸ್ಥಾನದ ಸರಹದ್ದಿನಲ್ಲಿ ಜಿಪ್ಸಿಗಳೆಂಬ ಒಂದು ಜಾತಿಯ ಲಾಕಡು ಮನುಷ್ಯರಿರುವರು. ಅನಾದಿ ಕಾಲದಿಂದ ಆ ಜಾತಿಯವರಲ್ಲಿ ಎಲ್ಲಾ ಅಧಿಕಾರವೂ ಸ್ತ್ರೀಯರದೇ. ಪುರುಷರು ಸ್ತ್ರೀಯರಿಗೆ ಅಡಿಯಾಳಾಗಿರಬೇಕು. ಸ್ತ್ರೀಯರು ತಮಗೆ ಮನಸ್ಸು ಬಂದ ಪುರುಷರನ್ನು ಮದುವೆಯಾಗಬಹುದು. ಎಷ್ಟುಜನರಿಯಾದರೂ ವಿವಾಹವಿಚ್ಛೇದನ ಮಾಡಿಕೊಳ್ಳಬಹುದು. ಮನೆಗಳಲ್ಲಿ ಹೆಂಡತಿಯ ಮಾತಿಗೆ ಗಂಡನು ಬದಲುಹೇಳಕೂಡದು. ಗಂಡನು ಸಂಪಾದಿಸಿದ ಹಣವನ್ನೆಲ್ಲವನ್ನೂ ಹೆಂಡತಿಗೆ ಕೊಟ್ಟುಬಿಡಬೇಕು. ಏಲ್ಲವನ್ನೂ ಕೊಡದಿದ್ದರೂ, ೩ ನೇ ೧ ಭಾಗವನ್ನು ಕೊಟ್ಟೇ ತೀರಬೇಕು. ಅವರಿಗೆ ಮಕ್ಕಳು ಹುಟ್ಟಿದಾಗ ಅವರು ತಾಯಿಯ ಹೆಸರನ್ನೇ ಹೇಳಬೇಕು. ತಂದೆಯ ಹೆಸರನ್ನು ಹೇಳಕೂಡದು. ಮಕ್ಕಳ ಮೇಲೆ ಅಧಿಕಾರವು ತಾಯಿಗೆ ಹೊರತು ತಂದೆಗಿಲ್ಲ. ಗಂಡನು ತಪ್ಪು ಮಾಡಿದರೆ ಅವನನ್ನು ಹೊಡೆಯುವ ಅಧಿಕಾರವು ಹೆಂಡತಿಗೆ ಇರುತ್ತದೆ. ಆ ಗ್ರಾಂತ್ಯದಲ್ಲಿ ಸ್ತ್ರೀಯರು ಡಿಕ್ಟೇಟರುಗಳಂತೆ ವರ್ತಿಸುತ್ತಾರೆ.

ವಿವಿಧ ವಿಷಯಗಳು

ಬೊಂಬಾಯಿ ವಿಶ್ವವಿದ್ಯಾನಿಲಯವು ತೆಲಗು ಭಾಷೆಗೂ ಆ ಯೂನಿವರ್ಸಿಟಿಯಲ್ಲಿ ಆದರಣೆಯನ್ನು ತೋರಿಸಿ ಯುಕ್ತ ವಿಸ್ತಾರವನ್ನು ಮಾಡುತ್ತಿರುವರು.

೨೨|| ಗ್ರೇನು ಬೆಳ್ಳಿ ೨೨|| ಗ್ರೇನು ವಿಶ್ವಲೋಹವುಳ್ಳ ಹೊಸಬಗೆಯ ಬೆಳ್ಳಿಯ ನಾಲ್ಕಾಣೆ ನಾಣ್ಯಗಳು ಟಂಕಸಾಲೆಯಿಂದ ಈ ತಿಂಗಳು ಗುರ್ರೇ ತಾರೀಖಿನ ದಿನ ಹೊರಬಿದ್ದು ಜಾರಿಗೆ ಬಂದಿದೆ.

ರಾತ್ರಿಗಳಲ್ಲಿ ಜರ್ಮನಿಯಲ್ಲಿ ದೀಪಗಳನ್ನು ಹೆಚ್ಚುತ್ತಿಲ್ಲವಾದ್ದರಿಂದ ಅಲ್ಲಿಯ ಒಂದು ಮುನಿಸಿಪಾಲಿಟಿಯ ರೋಡು ಇಂಜನ್ನನ್ನು ಯಾರೋ ಅಪಹರಿಸಿದರು ಹೆಲ್ಲಾಂಗು ಮುನಿಸಿಪಾಲಿಟಿಯವರು ರಸ್ತೆಯ ರಿಪೇರಿಗಾಗಿ 9 ಗಾಡಿಯಷ್ಟು ಕಂಕರನ್ನು ಜಮಾಯಿಸಿದ್ದರು. ಆದನ್ನು ಯಾರೋ ಎತ್ತಿಕೊಂಡು ಹೋಗಿರುವರಾದರೂ ಪೋಲೀಸಿನವರು ಅಪರಾಧಿಗಳ ಪತ್ತೆಯನ್ನು ಮಾಡಲಾಗಲಿಲ್ಲ. ದೀಪವಿದ್ದರೂ ಕಳ್ಳತನ, ಇಲ್ಲದಿದ್ದರೂ ಕಳ್ಳತನ!

ನ್ಯೂಯರ್ಕಿನಲ್ಲಿ 10 ವರ್ಷ ವಯಸ್ಸಿನ ಹುಡುಗಿಯೊಬ್ಬಳು ಮದುವೆ ಮಾಡಿಕೊಂಡಿದ್ದರಿಂದ ಆ ಹುಡುಗಿಯ ತಾಯಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ವರನ ವಯಸ್ಸು 21 ವಿುರದ್ದರಿರಿದ ಅತನಿಗೂ ಶಿಕ್ಷೆ ವಿಧಿಸಲ್ಪಟ್ಟಿತು.

ಪಂಜಾಬಿನ ಸ್ತ್ರೀಯರ ಸಂಘವು ವಿವಾಹ ಕಾಲದಲ್ಲಿ ತಂದೆಯು ಮಗಳಿಗೆ ಕೊಡುವ ಸ್ತ್ರೀ ಧನದ ಸಂಪೂರ್ಣ ಸ್ವಾತಂತ್ರ್ಯವು ಅಕೆಗೇ ಇರತಕ್ಕದ್ದೆಂದು ತೀರ್ಮಾನಮಾಡಿದೆ.

ಗಾಳಿಯ ಚಲನೆಯಿಂದ ವಿದ್ಯುಚ್ಛಕ್ತಿಯನ್ನು ಉತ್ಪನ್ನಮಾಡಿ, ಗ್ರಾಮಾದಿಗಳಲ್ಲೂ ಕೂಡ ಎಲೆಕ್ಟ್ರಿಕ್ ದೀಪಗಳನ್ನೂ, ಫ್ಯಾನುಗಳನ್ನೂ ಇಡಿಸುವ ಏರ್ಪಾಡುಮಾಡಲು ಸಿಂಧೂರಾಷ್ಟ್ರದ ಹಂಸರಾಜ್‌ರವರು ತಾವು ಕಂಡುಹಿಡಿದಿರುವ ಯಂತ್ರಗಳನ್ನು ತಯಾರಿಸುತ್ತಿರುವರು, ವೈರ್‌ಲೆಸ್ ಯಂತ್ರಗಳನ್ನು ಕೂಡ ಬಹಳ ಸುಲಭ ಬೆಲೆಯಲ್ಲಿ ಇವರು ತಯಾರಿಸಬಲ್ಲವರಾಗಿದ್ದಾರೆ.

ಕಲ್ಲಿದಲು, ಉಪ್ಪು, ಇವೆರಡನ್ನೂ ಬೆರಸಿ ಒಂದು ಬಗೆಯ ಆಂಟನ್ನು ತಯಾರಿಸುತ್ತಿರುವರು, ಎಲ್ಲಾ ಬಣ್ಣಗಳನ್ನೂ ಇದರೊಂದಿಗೆ ಕಲಿಸಿ ನಾನಾ ಬಣ್ಣಗಳ ಬೆಲ್ಟುಗಳು ಮುಂತಾದವುಗಳನ್ನು ತಯಾರಿಸುತ್ತಿರುವರು, ಶೀತೋಷ್ಣಗಳಿಂದಾಗಲಿ, ಆಸಿಡ್ಡಿನಿಂದಾಗಲಿ ಬೆಂಕಿಯಿಂದಾಗಲಿ ಈ ಪದಾರ್ಥಗಳು ಕೆಡುವುದಿಲ್ಲ.

ಶ್ರೀ ವೆಂಕಟಾದ್ರಿಕ್ಷೇತ್ರ ವೈಭವ ಮತ್ತು ಮಹಾತ್ಮ್ಯ

ಲೇಖಕರು— ಹೆಚ್. ಕೃಷ್ಣಮೂರ್ತಿ.

(ಹಿಂದಿನ ವಾರದಿಂದ ಮುಂದುವರಿದುದು)

ಶ್ರೀ ವೆಂಕಟೇಶ್ವರ ಸ್ವಾಮಿಯು ದಿವ್ಯಲಕ್ಷಣ ಮೂರ್ತಿಯಾಗಿ ಕಸ್ತೂರಿ ತಿಲಕವನ್ನು ಇಟ್ಟು ಕೊಂಡು ನಿಂತಿರುವುದು ದೂರದಲ್ಲೇ ಕಾಣುತ್ತೆ. ಅಂದರೆ ಒಳಪ್ರವೇಶಕ್ಕೆ ಧರ್ಮದರ್ಶನವಲ್ಲದ ಕಾಲದಲ್ಲಿ ಒಂದು ರೂಪಾಯಿ ಕಾಣಿಕೆ ಕೊಡಬೇಕು. ಧರ್ಮದರ್ಶನವು ಬೆಳಿಗ್ಗೆ- ಮಧ್ಯಾಹ್ನ ಮತ್ತು ಸಾಯಂಕಾಲ ಹೀಗೆ ಮೂರು ಸಾರಿ ನಡೆಯುತ್ತೆ. ವಂಗಳಾರತಿ, ಫಲಸಮರ್ಪಣೆ, ಗಳಿಗೆ ಟಿಕೀಟು ಪಡೆದಲ್ಲದೆ ನಡೆಯುವಾರದು. ಶ್ರೀ ಸ್ವಾಮಿಯನ್ನು ಐದಾರು ಬಾಗಿಲುಗಳನ್ನು ದಾಟಿದನೇಲೆ ಕಾಣಬಹುದು. ಆದರೆ ಮೊದಲನೆಯ ಬಾಗಿಲಲ್ಲೇ ದಿವ್ಯ ಸುಂದರ ಹಸನ್ಮುಖವು ನೇತ್ರಾನಂದವನ್ನುಂಟು ಮಾಡುತ್ತದೆ. ದೇವಸ್ಥಾನದೊಳಗಿನಿಂದ ಈಚೆಗೆ ಬರಲು ಮನಸ್ಸೇ ಬರುವದಿಲ್ಲ. ಅಂಥಾ ಕರುಣಾಮಯಮೂರ್ತಿ. ವಂಗಳಾರತಿ ಮಹಾನೈವೇದ್ಯ ಕಾಲದಲ್ಲಿ ಈಚೆ ಎರಡು ದೊಡ್ಡ ಗಂಟೆಗಳು ಬಾರಿಸಲ್ಪಡುತ್ತೆ. ಆದರ ನಾದವು ನಾರಾಯಣ, ಗೋವಿಂದ, ಎಂಬದಾಗಿ ಕೇಳಿಸುವ್ರದಲ್ಲದೆ ಕರ್ಣಾನಂದನನ್ನು ಉಂಟುಮಾಡುತ್ತೆ. ಈ ಎರಡು ಗಂಟೆಗಳೂ ಸಹ ಶ್ರೀ ವೆಂಕಟಾಚಲಪತಿಯು ಪರಿಣಯ ಕಾಲದಲ್ಲಿ ಶ್ರೀ ಸ್ವಾಮಿಯವರ ಮಾವಂದಿರಾದ ಆಕಾಶರಾಯರು ಕೊಟ್ಟಿದ್ದೆಂದು ಪುರಾಣಪ್ರಸಿದ್ಧಿಯಿದೆ. ಶ್ರೀ ಸ್ವಾಮಿಯವರಿಗೆ ಕಿರೀಟವಿದೆ, ಇದೂ ಸಹ ಆಕಾಶರಾಯರು ಅಳಿಯನಿಗೆ ಉಡುಗರೆ ಕೊಟ್ಟದ್ದೆಂದು ಪ್ರತೀತಿಯಿದೆ.

ಚಂದ್ರಗಿರಿ ರಾಜರಾದ ತೊಂಡಮಾನ ರಾಯರೆಂಬುವರು ಶ್ರೀ ಸ್ವಾಮಿಯಭಕ್ತರಲ್ಲೊಬ್ಬರೆಂದೂ, ಈತನೂ ಮತ್ತು ಈತನ ತಮ್ಮನೂ ಸದಾ ಅಗಾಧ್ಯ ಕಲಹವನ್ನಾಡಿ, ಸ್ವಾಮಿ ವೆಂಕಟಾಚಲಪತಿಯ ಸನ್ನಿಧಾನದಲ್ಲಿ ಹೇಳುತ್ತಿದ್ದರೆಂದೂ, ಅದರಂತೆ ಸ್ವಾಮಿಯು ಪರಿಹಾರ ಮಾಡಿ ನ್ಯಾಯಮಾಡುತ್ತಿದ್ದನೆಂದೂ, ಕೆಲವು ಕಾಲಾನಂತರ ತೊಂಡಮಾನರಾಯನು ಮೃತನಾಗಲು ಅವನ ಪತ್ನೀಪುತ್ರರು ಸ್ವಾಮಿಯನ್ನು ಮನೆಹೊಕ್ಕು ಆಸನವನ್ನು ಒದುಕಿಸಿಕೊಡಬೇಕೆಂದು ಕೇಳಿಕೊಂಡರೆಂದೂ, ಕರುಣಾಮೂರ್ತಿಯಾದ ಸ್ವಾಮಿಯು ಹಾಗೆಯೇ ಒದುಕಿಸಿದನೆಂದೂ, ಇದರಂತೆ ಇತರರೂ ಬಂದು ಮೊರೆಯಿಡಲಾರಂಭಿಸಿದರೆಂದೂ ಸ್ವಾಮಿಯು ಇನ್ನು ಇದರಿಂದ ತೊಂದರೆ ಹೆಚ್ಚಾಯಿತೆಂದು ಭಾವಿಸಿ, ಆಂದಿನಿಂದ ಮೌನಧಾರಣೆಯನ್ನು ತಾಳಿ ಶಿಲಾರೂಪನಾದನೆಂದೂ, ಕಲಿಯುಗದಲ್ಲಿ ತನ್ನ ಭಕ್ತರ ಕಷ್ಟನಿವಾರಣೆಯಲ್ಲಿ ಬಂದು ಇಷ್ಟಾರ್ಥವನ್ನು ಪರಿವೇರಿಸುವದಾಗಿ ಅಭಯವಿತ್ತಿರುವುದಾಗಿ ಪ್ರಸಿದ್ಧಿ ಇದೆ.

[ಸಶೇಷ.

ಗಾಂಧಿಯವರ ಅಮೃತವಾಣಿ.

ಭಾವಗರ್ಭಿತವಾದದ್ದು ಈತನ ವಾಣಿಯು. ಸತ್ಯಾಗ್ರಹ ವಿಚಾರವನ್ನು ಕುರಿತು. ಏನು ಹೇಳಿರುವರೆಂದರೆ— ಈ ವ್ರತವು ಎಲ್ಲಾ ವ್ರತಗಳಂತೆ ಅಲ್ಲ. ಹಾಸಿಗೆಯಿಂದ ಏಳುತ್ತಲೇ ಕಾಫೀ ಕುಡಿದು, ಇಡ್ಲಿ ತಿಂದು, ಬೆಳ್ಳಗಿರುವ ಖದ್ದರನ್ನು ಧರಿಸಿ, ಪೇಪರನ್ನು ಕೈಯಲ್ಲಿ ಸುರಳಿಯಾಗಿ ಸುತ್ತಿ ಹಿಡಿಮಾಕೊಂಡು, ಕಾಫೀಕ್ಲಬ್ಬುಗಳಲ್ಲಿಯೂ, ರಸ್ತೆಗಳ ಪಕ್ಕದಲ್ಲಿಯೂ, ರೈಟ್ಸ್ ಪ್ಲಾಟುಫಾರಂಗಿಳಲ್ಲಿಯೂ, ನಾವು ಮಾಡುವ ನಿತ್ಯಕೃತ್ಯಗಳಲ್ಲ. ಇದರಲ್ಲಿ ಅರ್ಪಿಸಬೇಕಾದ ಸಮಿತ್ತುಗಳು, ದೀಕ್ಷಾಬದ್ಧರಾದವರ ಪಂಚ ಪ್ರಾಣಗಳು. ಅಪ್ಪ ಅನ್ನದೆ, ಅಮ್ಮ ಅನ್ನದೆ, ಅಯ್ಯೋ ಅನ್ನದೆ, ಪ್ರಾಣವನ್ನು ಅರ್ಪಿಸಬೇಕಾಗಿ ಬರುವುದು. ಅಂದು ಪ್ರಹ್ಲಾದನು ಪಟ್ಟ ಕಷ್ಟವನ್ನೇ ಇಂದು ಸತ್ಯಾಗ್ರಹವನ್ನು ಮಾಡಲೆಳಸುವನು ಹೊಂದಲು ಸಂಸಿದ್ಧನಾಗಬೇಕು. ತಂದೆಯಾದ ಹಿರಣ್ಯಕಶಿಪು ಕೊಟ್ಟ ಕಷ್ಟಗಳನ್ನೆಲ್ಲವನ್ನೂ ಆ ಬಾಲಕನು "ಓ ಜನಾರ್ದನ, ಓ ಮುಕುಂದಾ" ಎಂಬೀರೀತಿಯಲ್ಲಿ ಸ್ಮರಣೆ ಮಾಡುತ್ತಾ ಸಹಿಸಿಕೊಂಡನಂತೆ. ಇಂದು ಅಂಥಾ ಧೈರ್ಯ, ಅಂಥಾ ಸಹನೆಗಳಿಲ್ಲದೆ ಸತ್ಯಾಗ್ರಹ ಪಥದಲ್ಲಿ ಅಡಿಯಿಟ್ಟಲ್ಲಿ ಮಹಾತ್ಮನು ಮಾಡಲೆಳೆಸಿದ ತಪಸ್ಸು ಅಸಾರ್ಥಕವಾಗುವದು. ಆದುದರಿಂದ ಜನರು ಜನ್ಮಾಗಿ ಯೋಚಿಸಿದ ತರುವಾಯ ಈಮಾರ್ಗವನ್ನನುಸರಿಸಬೇಕು. ಗಾಂಧಿಯವರು ಯೋಜನೆಮಾಡಿ, ಯೋಜನೆ ಮಾಡಿ ಒಂದೊಂದು ಹೆಜ್ಜೆಯನ್ನು ಮುಂದಿಡುತ್ತಿರುವರು. ಹೆಜ್ಜೆಯನ್ನು ಮುಂದಿಡುವಾಗ ಹಿಂದು ಮುಂದು; ಬಡಕ್ಕೆ ಬಲಕ್ಕೆ; ಮೇಲೆ ಕೆಳಗೆ ನೋಡುತ್ತಾ ನೋಡುತ್ತಾ ಮುಂಜರಿಯುತ್ತಿರುವರು. ಅತನಿಗೆ ಇನ್ನೂ ನಮ್ಮಲ್ಲಿ ನಂಬಿಕೆಯು ಬಂದಿರುವುದಿಲ್ಲ. ಈ ಸತ್ಯಾಗ್ರಹವ್ರತವು ಕತ್ತಿಯ ವೇಲೆ ನಡೆಯುವಂಥ ಕೆಲಸ. ಈ ಕತ್ತಿಯು ನಾಟಕಗಳಲ್ಲಿ ಉಪಯೋಗಿಸುವ ಕಾಗದದ ಕತ್ತಿಯಲ್ಲ. ಬಹಳ ಹರಿತವಾದ ಉಕ್ಕಿನ ಕತ್ತಿ. ಗಾಂಧಿಯವರಲ್ಲಿ ಸಂಪೂರ್ಣ ವಿಶ್ವಾಸವಿಡುವಂಥವರಿಗೆ ಈ ವಿದ್ಯವು ಸಾಧ್ಯವಾಗುವುದು. ಬರೀ ಮಾತುಗಾರರಿಗೆ ಇದು ಸಾಧ್ಯವಾಗದು. ಸರ್ಕಾರವೂ ಶಾಸನೋಲ್ಲಂಘನೆ ಮಾಡುವವರಿಗೆ ಶಿಕ್ಷೆಯನ್ನು ಕೊಡದೆ ಸುಮ್ಮನೆ ಶಾಂತತೆಯಿಂದಿರುವುದಿಲ್ಲ. ಆದುದರಿಂದ ಗಾಂಧೀಜಿಯವರು ಎಷ್ಟು ಉಪಾಯದಿಂದ ಈ ರಂಗವನ್ನು ನಡಿಸಬೇಕೆಂದು ಪ್ಲಾನ್ ಹಾಕಿದರೂ ಕೆಲವು ತೊಂದರೆಗಳು ಪ್ರಾಪ್ತವಾಗುತ್ತಲೇ ಇವೆ

ಗಾಂಧೀಜಿಯವರ ಕಾರ್ಯಕ್ಕೆ ಜಿನ್ನಾ ಮಹಾಶಯರ ಪಾಕಿಸ್ಥಾನದ ಪ್ರಶ್ನೆ, ಬೇರೆ ಬೇರೆ ಪಾರ್ಟಿಗಳವರ ಭಿನ್ನ ಭಿನ್ನ ಭಾವಗಳೂ ಅಡಚಣೆಯನ್ನು ತಂದು ಅತನ ಕಾರ್ಯಕ್ಕೆ ಸುಗಮ ರೀತಿಯಲ್ಲಿ ನಡೆಯು ದಂತೆ ಮಾಡುತ್ತಿವೆ.

ಎಂಥಾ ಅಹಿಂಸಾ ಕತ್ತರಿಗಾದರೂ (Non--Violence) ಗಾಂಧೀಯವರ ಸತ್ಯಾಗ್ರಹ ಸವರವು ಬಾಧೆಯನ್ನುಂಟುಮಾಡದೆ ಇರದು. ಎಷ್ಟು ಪ್ರಾಣಗಳು ಆ ಸವರದಲ್ಲಿ ಬಲಿಯಾಗಬೇಕೊ, ಎಷ್ಟು ಸಂಸಾರಗಳು ನಿರ್ನಾಮವಾಗಬೇಕೋ ಹೇಳಲಾಗುವದಿಲ. ಗಾಂಧೀಜಿಯವರ ವಾಣಿಯನ್ನು ಕೇಳಿದರೇನೇ ದೇಹವು ರೋಮಾಂಚನವಾಗುವದು. ಅವರು ಹೇಳುವಷ್ಟು ಶಾಂತಿಸ್ವಭಾವವವರು ಎಷ್ಟು ಮಂದಿ ಹೊರಬೀಳುವರೋ ನೋಡಬೇಕು. ಗಾಂಧೀಜಿ ಪತ್ನಿ ಮೈಸಾಯರು ಪುಸಃ ಸೇರಿ ದೇಶದ ವಿಷಯದಲ್ಲಿ ಸಂಭಾಷಣೆ ಮಾಡುವರೆಂಬ ವರ್ತಮಾನವನ್ನು ಹೊರಬಿದ್ದಿದೆ. ಸರ್ಕಾರವೂ, ಕಾಂಗ್ರೆಸ್ಸಿನವರುಗಳ ಪ್ರಯತ್ನಗಳನ್ನು ಅವು ಮಾಡುತ್ತಲಿರುವಾಗಲೂ ಈ ಎರಡರ ನಡುವೆ ಜನಗಳು ಸಿಕ್ಕಿ ಕಷ್ಟಕ್ಕೀಡಾಗುತ್ತಿರುವರು. ಹೀಗಿರುವದರಿಂದ ಈ ಸಮಯದಲ್ಲಿ ಬ್ರಿಟಿಷು ಸರಕಾರದವರು ಜನರ ವೇಲ್ಮೆಯ ಮೇಲೆ ದೃಷ್ಟಿಯಿಟ್ಟು ಶ್ರೀ ಗಾಂಧಿಯವರ ಸಲಹೆಗಳನ್ನು ತೆಗೆದುಕೊಂಡು ಭಾರತದೇಶದ ಎಲ್ಲಾ ಪ್ರಜೆಗಳಿಗೂ ಶಾಂತಿ ಸುಖಗಳು ಲಭಿಸುವಂಥಾ ಮಾರ್ಗವನ್ನು ಕಂಡುಹಿಡಿದು ಜಾರಿಗೆ ತರುವುದು ಉಚಿತವಾದ ದಾಗಿ ಕಾಣಬರುತ್ತದೆ.

ಒಟ್ಲರಿನ ಅಂತ್ಯ ದೆಶೆ.

ಸಿಂಹಳ ಸಂವತ್ಸರಾದಿಯ ದಿನ ಸಿಂಹಳ ಜ್ಯೋತಿಷ್ಯನು ಈ ರೀತಿಯಲ್ಲಿ ಕೊಲಂಬೋ ಸ್ಟೇಷನ್‌ನಿಂದ ಬ್ರಾಡ್‌ಕ್ಯಾಸ್ಟ್ ಮಾಡಿದಾನೆ—

ಗುರುವು 16—4—40 ರಲ್ಲಿ ಮೇಷರಾಶಿಯನ್ನು ಪ್ರವೇಶಿಸುವದರಿಂದ ಹಿಟ್ಲರಿನ ಪತನವು ಅಂದಿನಿಂದ ಆರಂಭವಾಗುವದು. ಅತನ ಅಧಿಕಾರವು ಈ ವರ್ಷದಲ್ಲಿ ಕೊನೆಗಾಣುವದು. ಕೇ | ಶೇ | 5 ನೇ ಜಾರ್ಜ್ ಚಕ್ರವರ್ತಿಯವರ ಮೊಮ್ಮಕ್ಕಳಾದ ಪ್ರಿನ್ಸ್ ಲೂಯಿರವರು ಜರ್ಮನಿಯ ರಾಜರಾಗುವರು.

ಕೃತಯುಗಾರಂಭ

ಅವೇರಿಕಾಕ್ಕೆ ಸಂಸದವೂ, ಇಟಲಿಗೆ ಕ್ಷೇಮವೂ, ಜಪಾನಿಗೆ ಜಯಪರಂಪರೆಗಳೂ ಕದಣುವರುವದೆಂದೂ ಅವನ ನುಡಿದಿರುವನು.

ಸೂರ್ಯ, ಚಂದ್ರ, ಪುಷ್ಯವಿಾ ನಕ್ಷತ್ರ ಬೃಹಸ್ಪತಿ ಇವು ಕಲೆತಾಗ ಕೃತಯುಗಾರಂಭವೆಂದು ಹೇಳಲಾಗಿದೆ. ಆ ಯೋಗವು 1043 ನೆಯ ಆಗಸ್ಟ್ ತಿಂಗಳಲ್ಲಿ ಕಾಣಬರುತ್ತಿದೆ. ಅಂದರೆ ಸ್ವಭಾನು ಸಂವತ್ಸರದ ಆಷಾಢ ಬಹುಳ ಅಮಾವಾಸ್ಯೆಯ ದಿನ ಕೃತಯುಗಾರಂಭವಾಗುವುದೆಂದು ಕೆಲವರು ಹೇಳುವರು.

ಶಸ್ತ್ರ ಚಿಕಿತ್ಸೆ

ಹುಟ್ಟಿದಾರಭ್ಯ ಕಾಲಿನ ಬಾವಿನಿಂದ ಬಾಧೆಪಡುತ್ತಿದ್ದ ಹುಡುಗನಿಗೆ ಲಂಡನ್ ಆಸ್ಪತ್ರೆಯಲ್ಲಿ 21 ತಿಂಗಳುಗಳ ಕಾಲದಲ್ಲಿ 15 ಬಾರಿ ಆಪರೇಷನ್ ಮಾಡಿದರೂ ಕಾಲಿನ ಬಾವು ತಗ್ಗಲಿಲ್ಲ. ನಂತರ ಕಾಲನ್ನು ಕತ್ತರಿಸಿಹಾಕುವುದೇ ಮಾರ್ಗವೆಂದು ನಿರ್ಧರಿಸಿದ್ದರು. ಆದರೆ ಸೂರ್ಯಕಿರಣ ಚಿಕಿತ್ಸೆಯಿಂದ ವಾಸಿಯಾಯಿತು.

ದೇವತಾ — ಅಪೇರಾ

ಶ್ರೀ ಶ್ರೀಕಂಠೇಶ್ವರ ಸುಲಭ ಸ್ಪರ್ಧೆ ನಂ ೪ ರ ಉತ್ತರ-

ಎಡದಿಂದ ಒಲಕ್ಕೆ

1 ಆದಿತ್ಯ 3 ಮಾತ 4 ರತಿ 5 ಕನಕ 6 ಪ್ರಾಣ 9 ದ್ವಿಜರು 12 ಅಗಣಿ

ಮೇಲಿನಿಂದ ಕಳಕ್ಕೆ

1 ಅರಣ್ಯ 2 ದಿತಿ 3 ಮಾನ 5 ಕಣಜ 7 ಅತ್ಯಾಶೆ 8 ಮದ್ದು 10 ರುಕ್ಮಿಣಿ 11 ಗುಣ

ಮ್ಯಾನೇಜರ್.

ನೂತನ ಗ್ರಾಮಫೋನ್.

ನ್ಯೂಯಾರ್ಕಿನ ಒಬ್ಬ ಯಂತ್ರಗಾರನು ಒಂದು ಹೊಸ ವಿಧವಾದ ಗ್ರಾಮೊಫೋನನ್ನು ತಯಾರಿಸಿದ್ದಾನೆ. ಅದನ್ನು ಸಣ್ಣೊಂದೂ ಆತಂಕವಿಲ್ಲದೆ 1000 ಸಾರಿಯಾದ್ರೂ ಉಪಯೋಗಿಸ ಬಹುದು.



VAIDYARATNAM
P. S. Varier's
Arya Vaidya Sala
Kottakkal
Branches – Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthfulness. It is so termed because Sage Chyava was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,
KOTTAKAL (S.Malabar)

The Satyavadi Limited
MYSORE
(Incorporated in Mysore State)
A few shares of Rs. 5 are available

Edited, Printed & published by
M .S. Krishna Rao, at the Satyavadi Press, Chamaraj Agrahar Mysore

ಶಿಲಾರಿಷ್ಟ

ಕಲ್ಲೊತ್ತು ಮತ್ತು ಹುಳುಕಡ್ಡಿಗೆ
ಸಿದ್ಧೌಷಧ. ಬೆಲೆ ೦–೬–೦.
ವಿಳಾಸ.— ವಿಜಯಲಕ್ಷ್ಮಿ ಸ್ಟೋರ್ಸ್
ಮೈಸೂರು ಬ್ಯಾಂಕ್ ರೋಡ್
ಮೈಸೂರು

ಸಂದೇಶ
ಕನ್ನಡ ರಾಷ್ಟ್ರೀಯ ವಾರಪತ್ರಿಕೆ
ಬೆಳಗಾವಿ
ಪ್ರತಿ ಶುಕ್ರವಾರ ಹೊರಡುವದು
ವಾರ್ಷಿಕ ಚಂದಾ ಸ್ಥಳದವರಿಗೆ ರೂ. 1–8–0
,, ಪರಸ್ಥಳದವರಿಗೆ ರೂ. 2—

When you desire to buy or sell
Houses & Sites
Govt. Loan Bonds
Shares of Companies
apply to
The Satyavadi Ltd., Mysore

ಪ್ರಪಂಚದ ನಿಜಸ್ಥಿತಿಯನ್ನು ತಿಳಿಯಬೇಕಾದರೆ
* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *
ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ, ಇಡೀ ಕರ್ನಾಟಕದ ಹೊರ–ಒಳ ಭಾಗಗಳಲ್ಲಿ ಎಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ
"ನವಸಂದೇಶ" ಕ್ಕೆ
ಇಂದೇ ಚಂದಾದಾರರಾಗಿರಿ.
ಅಂಚೇವೆಚ್ಚ ಸೇರಿ ರೂ. ೩–೮ ಗಳು
ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ
ನವಸಂದೇಶ ಕಾರ್ಯಾಲಯ, ಬಳ್ಳಾರಿ

ಪ್ರಿಂಟಿಂಗ್ ವಿಚಾರದಲ್ಲಿ
ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.
ಸತ್ಯವಾದಿ ಲಿಮಿಟೆಡ್,
ಚಾಮರಾಜಪುರಂ, ಮೈಸೂರು